ಕೊಂಡಿದ್ದ ಸುಮಾರು ೮½ ತೊಲ ತೂಕವಿದ್ದ ಕವಿ ಓಲೆಗಳನ್ನು ಹಾಜರುಪಡಿಸಿದನು. ಅದೇ ದಿನ ಮೇಲ್ಕಂಡ ನಸ್ತುಗಳನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡು ಜೆ. ಬಿ. ಎನ್. ರಘುರಾಮು ಎಂಬು ವನಿಗೆ ಸ್ವೀಕೃತಿ ರಸೀತಿಯನ್ನು ಕೊಡಲಾಯಿತು. ಕವಿಯು ಓಲೆಗಳನ್ನು ಫಿರ್ಯಾದಿದಾರರು ಮತ್ತು ಅವರ ಇತರ ಮನೆಯವರು ಗುರ್ತಿಸಿರುವರು. ಪೋಲೀಸ್‌ನವರು ಮೇಲ್ಕಂಡ ಅಪರಾಧಿಯು ಮಾಹಿತಿ ಮೇಲೆ ಸದರಿ ಅಪರಾಧಿಯು ಟಿ. ನರಸೀಪುರ, ಹುಣಸೂರು ಟೌನ್ ಮತ್ತು ಕೊಳ್ಳೇಗಾಲ ಟೌನಿನಲ್ಲಿ ಕಳ್ಳತನ ಮಾಡಿ ಇಟ್ಟಿದ್ದ ಕೆಲವು ಒಡವೆಗಳನ್ನು ಮತ್ತು ಬೆಳ್ಳಿಯ ವಸ್ತುಗಳನ್ನು ಮತ್ತೊಂದು ಅಂಗಡಿ ಯಲ್ಲಿ ವಶಪಡಿಸಿಕೊಳ್ಳಲಾಯಿತು. ಮೇಲ್ಕಂಡ ಸಂದರ್ಭದಲ್ಲಿ ಪೋಲೀಸರು ಕಾನೂನು ಪ್ರಕಾರ ಕ್ರಮ ತೆಗೆದುಕೊಂಡಂ ಕಳವು ಮಾಲುಗಳನ್ನು ವಶಪಡಿಕೊಂಡಿರುವರು. ಆದರೆ ಮೈಸೂರಿನ ರಘುವೀರ ಜ್ಯೂಯೆಲರ್ಸ್‌ನ ಮಾಲೀಕರಾದ ಜನಾರ್ಧನ್‌ರವರಿಗೆ ಪೋಲೀಸರು ಕಿರುಕಳು ಕೊಟ್ಟಿರುವುದು ಕಂಡು ಬರುವುದಿಲ್ಲ.

OFFICIAL RESOLUTION

SRI A. LAKSHMISAGAR. (Minister for Urban Development, Law and Parliamentary Affairs).—2 move the following resolution.

"Whereas the total number of seats in the Legislative Council of the State of Karnataka as fixed by Section 3 read with Third Schedule to the Representation of People Act, 1950, is 63;

And whereas under clause (1) of Article 171 of the Constitution of India the total number of Member in the Legislative Council of a State shall not exceed one-third of the total number of Members in the Legislative Assembly, and it is considered desirable that the number of Members in the Legislative Council of the State of Karnataka should, as nearly as may be, one-third of the number of Members of the State Legislative Assembly;

And whereas the total number of seats of the Karnataka Legislative Assembly is 224 as per the Second Schedule to the Representation of People Act, 1950;

Now, therefore, this House recommends that the total number of Members in the Karnataka Legislative Council be fixed at 75."

ಮಾನ್ಯ ಅಧ್ಯಕ್ಷರೇ, ಹಲವಾರು ವರ್ಷಗಳಿಂದ ಇದರ ಬಗ್ಗೆ ಚಿಂತನೆ ನಡೆದಿದೆ. ಹಲವಾರು ಸದಸ್ಯರು ಇದರ ಬಗ್ಗೆ ತಮ್ಮ ಅಭಿಪ್ರಾಯವನ್ನು ಈ ಸಭೆಯು ಮುಂದಿಟ್ಟಿದ್ದಾರೆ. ಆರ್ಟಿಕಲ್ ೧೭೧ ಪ್ರಕಾರ ವಿಧಾನ ಸಭೆಯ ಸದಸ್ಯರು ಸಂಖ್ಯೆಯನ್ನು ಅನುಸರಿಸಿ ವಿಧಾನ ಪರಿಷತ್ತಿನಲ್ಲಿ ೭೫ ಜನ ಸದಸ್ಯರಿರುವುದಕ್ಕೆ ಅವಕಾಶವಿದೆ. ಈಗ ಕಾರಣಾಂತರಗಳಿಂದ ವಿಧಾನ ಪರಿಷತ್ತಿನ ಸಂಖ್ಯೆ ೭೩ ಮಾತ್ರ ಇದೆ. ಆದ್ದರಿಂದ ವಿಧಾನ ಸಭೆಯ ಸದಸ್ಯರ ಸಂಖ್ಯೆಗನುಗುಣವಾಗಿ ವಿಧಾನ ಪರಿಷತ್ತಿನ ಸಂಖ್ಯೆಯನ್ನು ೭೩ ರಿಂದ ೭೫ ಕ್ಕೆ ಏರಿಸತಕ್ಕಂತಹ ನಿರ್ಣಯ ಇದು. ಇದನ್ನು ರೆಕಮಂಡ್ ಮಾಡಿ ಕೇಂದ್ರ ಸರ್ಕಾರಕ್ಕೆ ನಾನು ಕಳುಹಿಸುತ್ತೇಕು. ಕೇಂದ್ರ ಸರ್ಕಾರ ಇದರ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಂಡು ರೆಪ್ರೆಸೆಂಟೇಷನ್ ಆಫ್ ಪೀಪಲ್ ಆಕ್ಟ್‌ನಲ್ಲಿ ತಿದ್ದುಪಡಿ ಮಾಡಬೇಕಾಗುತ್ತದೆ. ಇದರ ಬಗ್ಗೆ ಈಗಾಗಲೇ ಕೇಂದ್ರ ಸರ್ಕಾರಕ್ಕೆ ನಾನು ಪತ್ರವನ್ನು ಬರೆದಿದ್ದೇವೆ ಆ ಪತ್ರಕ್ಕೆ ಉತ್ತರವನ್ನು ಕಳುಹಿಸುವುದರ ಜೊತೆಗೆ ನೀವು ಈ ಸಭೆಯಲ್ಲಿ ನಿರ್ಣಯವನ್ನು ಮಾಡಿ ಕಳುಹಿಸಿ ಎಂದು ಅವರು ಹೇಳಿದ್ದಾರೆ. ಅದಕ್ಕೋಸ್ಕರ ಈ ನಿರ್ಣಯವನ್ನು ಈ ಸಭೆಯ ಮುಂದಿಟ್ಟಿದ್ದೇವೆ. ಇದು ಎಲ್ಲರಿಗೂ ಅನುಕೂಲ ವಾಗತಕ್ಕಂಥಾದ್ದು. ಆ ಸಭೆಯಲ್ಲೂ ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಜನತಾ ಪ್ರತಿನಿಧಿಗಳು ಇದ್ದಾರೆ

ಜನರ ಮೊರೆಯನ್ನು ಆ ಸಭೆಗೆ ತಲುಪಿಸುವುದಕ್ಕೆ, ಅಲ್ಲಿ ಇಡುವುದಕ್ಕೆ ಸಾಧ್ಯವಾಗುತ್ತದೆ. ಇದರಿಂದ ಯಾರಿಗೂ ತೊಂದರೆಯೇನೂ ಆಗುವುದಿಲ್ಲ. ಇದು ಸಂವಿಧಾನ ಬದ್ಧವಾಗಿದೆ. ಕಾರಣಾಂತರಗಳಿಂದ ಹಿಂದಿನ ವರ್ಷದಲ್ಲಿ ಈ ಸಂಖ್ಯೆಯನ್ನು ಹೆಚ್ಚಳ ಮಾಡುವುದಕ್ಕೆ ಆಗಿಲ್ಲ. ಮಾನ್ಯ ಸಭೆ ಇದಕ್ಕೆ ಪೂರ್ಣ ಬಹುಮತವನ್ನು ಕೊಟ್ಟು ಈ ನಿರ್ಣಯವನ್ನು ಪಾಸ್ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇವೆ.

† ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಈ ಸರ್ಕಾರೀ ನಿರ್ಣಯ ಏನಿದ್ದೆ ಇದನ್ನು ವಿರೋಧಿಸಿ ಕೆಲವು ಮಾತಾಡುವುದಕ್ಕೆ ಇಷ್ಟಪಡುತ್ತೇನೆ. ಕೆಲವು ಕಾರಣಗಳ ಆಧಾರದ ಮೇಲೆ ನಾನಂ ಇದನ್ನು ವಿರೋಧಿಸುತ್ತಿದ್ದೇನೆ. ಮೇಲ್ಮನೆಯಲ್ಲಿ ಈಗಿರತಕ್ಕಂತಹ ಸಂಖ್ಯೆಯೇನಿದೆ ಅದನ್ನು ಜಾಸ್ತಿ ಮಾಡಬೇಕೆಂದು ನಿರ್ಣಯವನ್ನು ತಂದಿದ್ದಾರೆ. ಕಾನೂನು ಪ್ರಕಾರ ಈ ಮನೆಯ ಸಂಖ್ಯೆ ೨೨೪ ಇದ್ದಾಗ ಅದು ಇದರ ಮೂರನೇಯ ಒಂದು ಭಾಗವನ್ನು ಇರಬೇಕಾಗುತ್ತದೆ. ಈಗ ಇರತಕ್ಕಂತಹ ಸಂಖ್ಯೆ ೬೩ ಅದನ್ನು ೭೫ ರ ವರೆಗೆ ಜಾಸ್ತಿ ಮಾಡುವುದರಿಂದ ೧೨ ಜಾಸ್ತಿಯಾದ ಹಾಗೆ ಆಗುತ್ತದೆ ಎನ್ನತಕ್ಕಂತಹ ಅಭಿಪ್ರಾಯವನ್ನು ಇಟ್ಟಿದ್ದೇವೆಂದು ತಾವು ಈಗ ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ತಿಳಿಸಿದ್ದೀರಿ. ಕೇಂದ್ರ ಸರ್ಕಾರಕ್ಕೆ ಈಗಾಗಲೇ ಪತ್ರ ಬರೆದಿದ್ದೇವೆ ಅಲ್ಲಿಂದ ಅವರು ಈ ಸದನದ ನಿರ್ಣಯ ಬೇಕಾಗುತ್ತದೆಂಬ ಅಭಿಪ್ರಾಯವನ್ನು ಕೊಟ್ಟ ಮೇಲೆ ನಾವು ಇಲ್ಲಿ ಇದನ್ನು ಮುಂಡನೆ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ. ಈಗ ಇಲ್ಲಿರತಕ್ಕಂತಹ ಪ್ರಶ್ನೆ ಏನೆಂದರೆ ಈಗಿರತಕ್ಕಂತಹ ಸಂಖ್ಯೆ ಏನಿದೆ, ಅದನ್ನು ೭೫ ಕ್ಕೆ ಜಾಸ್ತಿ ಮಾಡಬೇಕಾಗುತ್ತದೆ ಆದರೆ ಇಲ್ಲಿಯವರೆಗೆ ೭೫ ಏತಕ್ಕೆ ಇತ್ತು ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ. ಅದು ಬಹಳ ಮುಖ್ಯವಾದುದು. ಕಾನೂನು ಪ್ರಕಾರ ಈ ಸದನದ ಮೂರನೆಯ ಒಂದು ಭಾಗ ಅಲ್ಲಿ ಇರಬೇಕೆಂದಿದ್ದು ಅದರ ಪ್ರಕಾರ ೭೫ ಕ್ಕೆ ಅದು ಏರಬೇಕೆಂದಿದ್ದರೆ ಅದು ಕಾನೂನಿನ ಪ್ರಶ್ನೆಯಾಯಿತು. ಆ ಸದನ ಹುಟ್ಟಿದ ಮೇಲೆ, ಈ ಸದನದ ಸಂಖ್ಯೆಯು ಜಾಸ್ತಿಯಾದದ್ದೂ ಇಲ್ಲ ಕಡಿಮೆಯಾದರೂ ಇಲ್ಲ, ಆ ಸದನದ ಹುಟ್ಟಿದ ಮೇಲೆ ಇರತಕ್ಕಂತಹ ಸಂಖ್ಯೆ ೭೫. ಅಷ್ಟೇಅಲ್ಲದೆ ಮೇಲ್ಮನೆ ಏತಕ್ಕೆ ಇರಬೇಕು ಎಂಬುದರ ಬಗ್ಗೆ ದೊಡ್ಡ ವ್ಯಾಖ್ಯಾನವೇ ಇದೆ? ಪಾರ್ಲಿಮೆಂಟಿನಲ್ಲಿ ಇದ್ದ ಹಾಗೆ ಇಲ್ಲಿ ಮೇಲ್ಮನೆ ಇದ್ದರೆ ಹೇಗೆ ಎಂಬುದರ ಬಗ್ಗೆ ಬೇಕಾದಷ್ಟು ಅಭಿಪ್ರಾಯಗಳನ್ನು ಭಿನ್ನಾಭಿಪ್ರಾಯಗಳನ್ನು ಕಂಡಿದ್ದೇವೆ. ಪಾರ್ಲಿಮೆಂಟಿನಲ್ಲಿ ಮೇಲ್ಮನೆಯು ಅವಶ್ಯಕತೆ ಇದೆ. ಅಲ್ಲಿನ ರಾಜ್ಯಸಭಾ ಏನಿದೆ ಅದು ಅಪ್ಪರ್ ಹೌಸ್ ಆಗಿ ಕೆಲಸ ಮಾಡುತ್ತಿದೆ, ಲೋಕಸಭೆಯು ಲೋಯರ್ ಹೌಸ್ ಆಗಿ ಕೆಲಸ ಮಾಡುತ್ತಿದೆ. ಅಲ್ಲಿ ದೇಶದ ವಿದ್ಯಮಾನಗಳು ಆಡಳಿತ ಪ್ರಮುಖವಾಗಿರತಕ್ಕಂತಹ ವಿಚಾರ, ರಾಷ್ಟ್ರದ ಸಮಗ್ರತೆ, ರಾಷ್ಟ್ರದ ಭದ್ರತೆಯ ಪ್ರಶ್ನೆ ಬರಬಹುದು, ಅದನ್ನೆಲ್ಲಾ ಅಮೂಲಾಗ್ರವಾಗಿ ಚರ್ಚೆಗೆ ಒಳಪಡಿಸಬೇಕಾಗುತ್ತದೆಂಬ ಉದ್ದೇಶದಿಂದ ಅಲ್ಲಿ ಎರಡೂ ಸದನಗಳ ಇರುವಿಕೆಯನ್ನು ನಾವು ಸ್ವಾಗತ ಮಾಡಿದ್ದೇವೆ. ಅದೇ ರೀತಿಯಾಗಿ ರಾಜ್ಯದಲ್ಲೂ ಕೂಡ ಮೇಲ್ಮನೆಯನ್ನು ಇಟ್ಟುಕೊಳ್ಳಬೇಕೆಂದರೆ ಇಟ್ಟು ಕೊಳ್ಳಬಹುದು, ಬೇಡವೆಂದರೆ ಬಿಡಬಹುದು. ಇರಬೇಕೆಂಬ ಕಡ್ಡಾಯದ ಪ್ರಶ್ನೆ ಇಲ್ಲ. ನಮ್ಮ ರಾಜ್ಯದಲ್ಲಿ ಮೇಲ್ಮನೆ ಇರಬೇಕೇ ಬೇಡವೇ ಎಂಬ ಪ್ರಶ್ನೆಗೆ ಹೋಗುವುದಿಲ್ಲ. ಅದು ಅಪ್ರಕೃತ. ಆ ಮನೆಯಲ್ಲಿರತಕ್ಕಂತಹ ಸದಸ್ಯರು ತಮ್ಮ ಗಳ ಸೇವೆಯನ್ನು ಸಲ್ಲಿಸುತ್ತಿದ್ದಾರೆ, ಅದು ಅಲ್ಲಿರತಕ್ಕಂತಹ ಪ್ರಶ್ನೆ. ಅಖಂಡ ಭಾರತದಲ್ಲಿ ನಮ್ಮ ಕರ್ನಾಟಕ ರಾಜ್ಯದ ರೀತಿಯಲ್ಲಿ ಎಲ್ಲಾ ರಾಜ್ಯದಲ್ಲೂ ಕೂಡ ಮೇಲ್ಮನೆಯನ್ನು ಇಟ್ಟುಕೊಂಡಿದ್ದಾರೆಯೇ ಎಂದಂ ಪ್ರಶ್ನೆ ಹಾಕಿದರೆ, ಎಲ್ಲಾ ರಾಜ್ಯದಲ್ಲೂ ಇಲ್ಲ ಎನ್ನತಕ್ಕಂತಹ ಉತ್ತರವನ್ನು ನಾವು ಪಡೆಯಬೇಕಾಗುತ್ತದೆ. ಪಶ್ಚಿಮ ಬಂಗಾಳದಲ್ಲಿ ಮೇಲ್ಮನೆ ಇಲ್ಲ. ಕೇರಳದಲ್ಲಿ ಗುಜರಾತಿನಲ್ಲಿ, ಪಂಜಾಬಿನಲ್ಲಿ ಮೇಲ್ಮನೆ ಇಲ್ಲ ನಮ್ಮ ರಾಷ್ಟ್ರದಲ್ಲಿರತಕ್ಕಂತಹ ಎಲ್ಲಾ ರಾಜ್ಯಗಳಲ್ಲೂ ಕೂಡ ಮೇಲ್ಮನೆ ಇಲ್ಲವೆನ್ನತಕ್ಕಂತಹ ಅಂಶವನ್ನು ನಾವು ಮನಗಾಣಬೇಕಾಗುತ್ತದೆ. ಆಂಧ್ರದ ಪಟ್ಟಿಗೆ ಸೀಮಿತಗೊಳಿಸಿ ಹೇಳಬೇಕಾದರೆ ಅಲ್ಲಿ ಮೇಲ್ಮನೆ ಏನಿತ್ತು, ಅದನ್ನು ಈಗಿರತಕ್ಕಂತಹ ಸರ್ಕಾರ ರದ್ದು ಮಾಡಬೇಕೆಂದು ಒಂದು ನಿರ್ಣಯವನ್ನು ಪಾಸ್ ಮಾಡಿ ಕೇಂದ್ರ ಸರ್ಕಾರಕ್ಕೆ ಕಳಂಹಿಸಿತ್ತು. ಅವರು ಅದನ್ನು ರದ್ದು ಮಾಡಿದ್ದಾರೆ. ಅದು ಅವರಿಗೆ ಸೇರಿರತಕ್ಕಂತಹ ವಿಚಾರ. ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮಲ್ಲಿರತಕ್ಕಂತಹ ಪ್ರಶ್ನೆ ಈ ಸದನ ಇರಬೇಕೇ ಬೇಡವೇ ಎಂಬುದರ ಬಗ್ಗೆ ಚರ್ಚೆಗೆ ಒಳಪಟ್ಟಿರತಕ್ಕಂತಹ ವಿಚಾರ, ಜಿಜ್ಞಾಸೆಗೆ ಒಳಪಟ್ಟಿರತಕ್ಕಂತಹ ವಿಚಾರ, ಉತ್ತರವನ್ನು ತತ್‌ಕ್ಷಣ ಅಷ್ಟೊಂದು ಸಮರ್ಪಕವಾಗಿ ಕೊಡತಕ್ಕಂತಹ ಪ್ರಶ್ನೆಯಾಗಿ, ಈ ಪ್ರಶ್ನೆ ಉಳಿದಿಲ್ಲ. ಅದು ಏನೇ ಇರಲಿ. ಈ ವಿಚಾರ ಚರ್ಚೆಯಾಗತಕ್ಕಂತಹ

ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿಯೂ ಕೂಡ ಮೇಲ್ಮನೆಯನ್ನು ರಚನೆ ಮಾಡಬೇಕೆಂದು ಹೇಳುವುದಕ್ಕೆ ಹೋಗಲಿಲ್ಲ ಅದನ್ನು ಮಾಡಬೇಕೇ ಬೇಡಬೇಕೇ ಎಂಬುದರ ಬಗ್ಗೆ ಸಮಗ್ರವಾಗಿ ಆಳವಾಗಿ ಅಭ್ಯಾಸ ಮಾಡಿ ನಮ್ಮ ಅಂತಿಮ ತೀರ್ಮಾನಕ್ಕೆ ಬರೋಣ. ಈಗಾಗಲೇ ಆ ಸದನ ಇದೆ ಅದರ ಸದುಪಯೋಗ ಎಷ್ಟರ ಮಟ್ಟಿಗೆ ನಡೆದಿದೆ ಎಂಬ ವಿಚಾರವೂ ಕೂಡ ತಿಳಿದಿದೆ. ಅಲ್ಲಿ ಈಗಿರತಕ್ಕಂತಹ ಮಾನ್ಯ ಸದಸ್ಯರುಗಳು ಹಾಗೂ ಹಿಂದೆ ಇದ್ದಂತಹ ಸದಸ್ಯರುಗಳು ತಮ್ಮ ಅನುಭವಗಳನ್ನು, ವಿಚಾರಧಾರೆಗಳನ್ನು ಕಾನೂನು ಚೌಕಟ್ಟಿನಲ್ಲಿ ತಮ್ಮ ಅಭಿಪ್ರಾಯಗಳನ್ನು ಇಡತಕ್ಕಂಥಾದ್ದು ಆ ಸದನದಲ್ಲಿ ನಡೆದಿದೆ. ಈಗಲೂ ನಡೆಯುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಆ ಸದನದ ಸೇವೆಯನ್ನು ಸ್ವಾಗತ ಮಾಡಿದ್ದಾರೆ, ಈಗಲೂ ಮಾಡುತ್ತೇವೆ, ಮುಂದೆಯೂ ಸಮರ್ಥಿಸುತ್ತೇವೆ. ಈಗಿರತಕ್ಕಂತಹ ೬೫ ಸಂಖ್ಯೆಯನ್ನು ೭೫ ಕ್ಕೆ ಏರಿಸಬೇಕೆಂಬ ಒತ್ತಡ ಏನಿದೆ, ಅದು ಇರಲಿ, ನೀವೇ ಈ ಸದನದಲ್ಲಿ ಹಿಂದೆ ಮೇಲ್ಮನೆ ಇರಬೇಕೇ ಬೇಡವೇ ಎಂಬವಿಚಾರದಲ್ಲಿ ಬೇಕಾಗಿಲ್ಲ ಎನ್ನತಕ್ಕಂತದ್ದನ್ನು ಸರ್ಕಾರದ ಪರವಾಗಿ ಹೇಳಿಕೆ ಕೊಟ್ಟದ್ದು ದಾಖಲೆಯಲ್ಲಿ ಇದೆಯೆಂದು ಭಾವಿಸಿದ್ದೇನೆ. ಇದು ಚರ್ಚೆಗೆ ಬಂದಾಗ ಸುಮಾರಾಗಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂತೆ ನೆನಪು ಇದೆ.

ಶ್ರೀ ಎ. ಲಕ್ಷ್ಮೀಸಾಗರ್.—ಸಂಶಯ ಬರತಕ್ಕಂತಹ ಸನ್ನಿವೇಶದಲ್ಲಿ ಅವರು ನಮ್ಮ ಮುಂದೆ ಮೇಲ್ಮನೆ ರದ್ದುಗೊಳಿಸತಕ್ಕಂತಹ ವಿಚಾರವಿಲ್ಲವೆಂದು ಘಂಟಾ ಘೋಷವಾಗಿ ಇದೇ ಸಭೆಯಲ್ಲಿ ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಈ ಅಭಿಪ್ರಾಯವನ್ನು ಯಾವ ದಿನಾಂಕದಂದು ಇಟ್ಟಿದ್ದಾರೆಂದು ಗೊತ್ತಾಗುತ್ತಿಲ್ಲ. ಮೇಲ್ಮನೆ ಅವಶ್ಯಕತೆ ಇಲ್ಲ ಎಂಬ ಅಭಿಪ್ರಾಯವನ್ನು ಇಟ್ಟು ಮಾತನಾಡಿದ್ದಿರಿ. ಮಾತನಾಡಿಲ್ಲವೆಂದರೆ ಆ ಪ್ರಶ್ನೆ ಬೇರೆ. ಆ ರೀತಿ ಹೇಳಲಿಲ್ಲವೆಂದರೆ ಆ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ ಮೇಲ್ಮನೆಯ ಇರುವಿಕೆಗೆ ತಮ್ಮ ಒಪ್ಪಿಗೆ ಇದೆಯೆಂದು ನಾನು ಭಾವಿಸುತ್ತೇನೆ. ಮಾನ್ಯ ವೆಂಕಟರಾಮಯ್ಯನವರು ಮೇಲ್ಮನೆಯನ್ನು ರದ್ದು ಮಾಡಬೇಕೆಂಬುದರ ಬಗ್ಗೆ ಖಾಸಗೀ ನಿರ್ಣಯವನ್ನು ಕಳಿಸಿಕೊಟ್ಟಿರತಕ್ಕಂಥಾದ್ದು ರೀಚ್ ಆಗಿಲ್ಲ ಅದು ಲ್ಯಾಪ್ಸ್ ಆಯಿತೆಂದು ಕಾಣಿಸುತ್ತದೆ.

ನಾನ್‌ಅಫಿಷಿಯಲ್ ರೆಸಲ್ಯೂಷನ್ ಅದು ಹೊರಟು ಹೋಗಿರಬೇಕು. ಆದ್ದರಿಂದ, ಮೇಲ್ಮನೆ ಅಥವಾ ಯಾವುದೇ ಮನೆ ಇರಬಹುದು ಹಲವಾರು ರಾಜಕೀಯ ಪಕ್ಷಗಳು ಇರುವಿಕೆಗೆ ಪ್ರಜಾ ಪ್ರಭುತ್ವದ ವ್ಯವಸ್ಥೆಯಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ತಮ್ಮದೇ ಆದ ಪ್ರತಿನಿಧಿಗಳ ಮುಖಾಂತರ ಆ ಪಕ್ಷದ ಚಿಂತನೆ, ಅದರ ಹಿನ್ನೆಲೆ ಮುಂದಿಟ್ಟು, ರಾಜ್ಯ, ರಾಷ್ಟ್ರದ ಹಿತದೃಷ್ಟಿಯಿಂದ ಹೇಳತಕ್ಕದ್ದು ಬರುತ್ತದೆ. ನಮ್ಮ ಸದನ ತೆಗೆದುಕೊಂಡರೆ ಕರ್ನಾಟಕ ರಾಜ್ಯದಲ್ಲಿರತಕ್ಕ ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ಪ್ರತಿನಿಧಿಗಳನ್ನು ಒಳಗೊಂಡಿಲ್ಲದೇ ಇರಬಹುದು. ಪಕ್ಷಗಳು ದೊಡ್ಡದು, ಸಣ್ಣದು, ಇರಬಹುದು, ಅದರ ಬಗ್ಗೆ ಹೇಳುವ ಅವಶ್ಯಕತೆ ಇಲ್ಲ. ಒಬ್ಬರು ಗೆದ್ದು ಬಂದರೂ ಕೂಡ ಚುನಾಯಿತ ಪ್ರತಿನಿಧಿಯಾಗಿ ಬರುತ್ತಾರೆ, ಸ್ವಾಗತ ಮಾಡಬೇಕಾಗುತ್ತದೆ, ಯಾವುದೇ ರಾಜಕೀಯ ಪಕ್ಷಕ್ಕೆ ಸೇರದವರು ಸಹ ಈ ಒಂದು ಸದನಕ್ಕೆ ಆಯ್ಕೆಯಾಗಿ ಬರುವುದು ಕಂಡಿದ್ದೇನೆ. ಯಾರು ಅತೀ ಕಡಿಮೆ ಮತಗಳನ್ನು ಪಡೆಯುತ್ತಾರೆ ಅವರು ಮುಂದೆ ಚುನಾವಣೆಯಲ್ಲಿ ನಿಲ್ಲಲಿಕ್ಕೆ ಅವಕಾಶ ಕೊಡಬಾರದು ಎನ್ನುವ ಬಗ್ಗೆ ಪತ್ರಿಕೆಗಳಲ್ಲಿ ಏನು ಬಂದಿದೆ ಅದನ್ನು ಮಾಡುವುದು ಕಷ್ಟವಾಗುತ್ತದೆ ಸ್ವತಂತ್ರ ಅಭ್ಯರ್ಥಿಯಾಗಿ ನಿಲ್ಲತಕ್ಕವರು ಇರಬಹುದು. ಇದನ್ನು ರಾಜ್ಯಾಂಗ ಬದ್ಧವಾಗಿ ನಿಷೇಧ ಮಾಡತಕ್ಕದ್ದು ಕಷ್ಟಸಾಧ್ಯ; ಸಾಧ್ಯವಾಗಲಾರದು. ಯಾವುದೇ ರಾಜಕೀಯ ಪಕ್ಷಗಳಿಗೆ ಸಂಪರ್ಕ ಇಲ್ಲದೇ ಇರತಕ್ಕವರು ಆಯ್ಕೆಯಾಗಿ ಬಂದಿದ್ದಾರೆ. ಸಿ.ಪಿ.ಐ., ಸಿ.ಪಿ.ಎಂ., ಎಂ.ಇ.ಎಸ್. ಅಲ್ಲದೆ, ಸ್ವತಂತ್ರವಾಗಿ ಪಕ್ಷೇತರರಾಗಿ ಆಯ್ಕೆಯಾಗಿ ಬಂದಿರತಕ್ಕ ಸದಸ್ಯರು ಈ ಮನೆಯಲ್ಲಿ ಇದ್ದಾರೆ. ಅದೇ ರೀತಿಯಲ್ಲಿ ಮೇಲ್ಮನೆಯಲ್ಲಿ ಇರತಕ್ಕದ್ದು ಕಂಡಿದ್ದೇವೆ. ಸಿ.ಪಿ.ಐ., ಸಿ.ಪಿ.ಎಂ; ಇದೇ ರೀತಿ ಬೇರೆ ಪಕ್ಷಕ್ಕೆ ಸಂಬಂಧಪಟ್ಟವರಲ್ಲದಿದ್ದವರು ಪಕ್ಷೇತರರು ಕೂಡ ಆಯ್ಕೆಯಾಗಿ ಬಂದಿರುವವರು ಅಲ್ಲಿ ಇದ್ದಾರೆ. ಅನಂತರ ಅವರು ಯಾವುದೇ ಪಕ್ಷಕ್ಕೆ ಸಹ ಸದಸ್ಯರು ಪಡೆದು ಸೇರಿರುವಂಥಾದ್ದು ಮಾಡಿರಬಹುದು. ನಮ್ಮ ಪ್ರಜಾ ಪ್ರಭುತ್ವದ ಪದ್ಧತಿಯಲ್ಲಿ ಪಕ್ಷೇತರರೂ ಆಯ್ಕೆಯಾಗಿ ಬರತಕ್ಕದ್ದನ್ನು ನಾವೆಲ್ಲರೂ ಒಪ್ಪಿಕೊಂಡು ಇಟ್ಟುಕೊಂಡಿದ್ದೇವೆ. Until it is changed. ಈ ದೃಷ್ಟಿಯಿಂದ ಅಲ್ಲಿ ಹೌಸ್ ಕಾಂಪೋಜಿಷನ್

ಏನಿದೆ, ಅದರಿಂದ ಸದನ ನಿರ್ಮಾಣವಾಗಬೇಕು, ಇದು ಮಾನ್ಯ ಸದಸ್ಯರು ಆಯ್ಕೆಯಾಗಿ ಬಂದಾಗ ಮಾತ್ರ ಆಗುತ್ತದೆ ಇಲ್ಲದೇ ಇದ್ದರೆ ಆ ಸದನದ ಹಂಟ್ಟು ಇರುವಿಕೆಗೆ ಏನೂ ಅರ್ಥ ಬರುವುದಿಲ್ಲ. ಇದು ಮೊದಲನೆಯ ಹಂತದ ವಿಚಾರ. ಇನ್ನು ನಮ್ಮ ಮುಂದಿರತಕ್ಕ ಪ್ರಶ್ನೆ ಅಂದರೆ ಈಗ ಇರತಕ್ಕ ಸಂಖ್ಯೆಯನ್ನು ಕಡಿಮೆ. ಮಾಡಬೇಕೇ ಅಥವಾ ಜಾಸ್ತಿ ಮಾಡಬೇಕೇ ಎನ್ನುವುದು. ಪೀಪಲ್ಸ್ ರೆಪ್ರಸೆಂಟೇಟೀವ್ ಆಕ್ಟ್ ಪ್ರಕಾರ ಹಿಂದೆ ಇದ್ದಂಥ ಸಂಖ್ಯೆಗಿಂತಲೂ ಇದು ಜಾಸ್ತಿಯಾಗಿದೆ ೧೯೭೬ ರಲ್ಲಿ ೨೧೬ ಸ್ಥಾನಗಳು ಇದ್ದವು. ೧೯೭೮ ರಲ್ಲಿ ಇದು ಬದಲಾವಣೆ ಆಯಿತು. ಡೀ ಲಿಮಿಟೇಷನ್ ಪ್ರಕಾರ ಕಾನ್ಸ್‌ಟಿಟುಯೆನ್ಸಿಗಳು ಆದಾಗ ನಮ್ಮ ದೇಶದಲ್ಲಿ ಜನಸಂಖ್ಯೆ ಜಾಸ್ತಿಯಾಗುತ್ತದೆ ಜನಸಂಖ್ಯೆ ಪ್ರಮಾಣ ದಿನೇ ದಿನೇ ಜಾಸ್ತಿಯಾಗುತ್ತದೆ ಎನ್ನುವುದನ್ನು ಮನಸ್ಸಿನಲ್ಲಿಟ್ಟುಕೊಂಡು ಹೆಚ್ಚು ಸ್ಥಾನಗಳನ್ನು ಜಾಸ್ತಿ ಮಾಡಿಇಟ್ಟಿದ್ದಾರೆ. ಜನ ಸಂಖ್ಯೆ ಬೆಳವಣಿಗೆ ಜಾಸ್ತಿಯಾಗಬಹುದು ಎನ್ನುವ ದೃಷ್ಟಿಯಿಂದ ನಮ್ಮ ಸದನದಲ್ಲಿ ಜಾಸ್ತಿ ಸ್ಥಾನಗಳು ಇರಬೇಕೆಂದು ವಿಶಾಲವಾದ ಸಭಾಭವನವನ್ನು ನಿರ್ಮಾಣ ಮಾಡಿದ್ದಾರೆ. ನಿಜವಾಗಿ ಹೇಳಬೇಕೆಂದರೆ, ಕೆಂಗಲ್ ಹನುಮಂತಯ್ಯನವರು ವಿಧಾನ ಸೌಧ ಕಟ್ಟಿಸತಕ್ಕ ಕಾಲದಲ್ಲಿ ಬಹಳ ಸುಸಜ್ಜಿತವಾದಂಥ ಸಭಾಭವನವನ್ನು ನಿರ್ಮಾಣ ಮಾಡಿಸಿದ್ದಾರೆ. ಇಂಥ ಸಭಾಭವನಗಳು ಬೇರೆ ಕಡೆಗಳಲ್ಲಿ ಇರತಕ್ಕದ್ದು ಅಪರೂಪ. ಚಂಡೀಗಢದ ಭವನ ಚೆನ್ನಾಗಿದೆ ಎಂದು ಕೇಳಿದ್ದೇನೆ, ಅದನ್ನು ನಾನು ನೋಡಿಲ್ಲ. ಆದರೆ ಇಷ್ಟು ಚೆನ್ನಾಗಿಲ್ಲ ಎನ್ನುವುದು ತಿಳಿದುಬಂದಿದೆ. ಇನ್ನು ಹೌಸ್ ಆಫ್ ಕಾಮನ್ಸ್ ಇನ್ ಇಂಗ್ಲೆಂಡ್, ಅಲ್ಲಿ ಹೇಗಿದೆಯೋ ನಾನು ಇಲಿಯಂವರೆಗೂ ಪರ ದೇಶಕ್ಕೆ ಹೋಗಿಲ್ಲ.

ಅಧ್ಯಕ್ಷರು.—ಹೌಸ್ ಆಫ್ ಕಾಮನ್ಸ್‌ದಂ ಇದರಷ್ಟು ಚೆನ್ನಾಗಿಲ್ಲ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಇಲ್ಲಿಗೂ, ಅಲ್ಲಿಗೂ ಮಧ್ಯೆ ಒಂದು ಸಣ್ಣ ಟೇಬಲ್ ಇದೆ. ಎಲ್ಲಾ ಮೆಂಬರ್ಸ್ ಒಟ್ಟಿಗೆ ಬಂದರೆ ಅಲ್ಲಿ ಕುಳಿತುಕೊಳ್ಳುವುದಕ್ಕೆ ಜಾಗ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಎಲ್ಲರೂ ಬರುವುದಿಲ್ಲ ಎನ್ನುವ ವಿಚಾರ ಇರಬಹುದು. ಹೌಸ್ ಆಫ್ ಕಾಮನ್ಸ್ ಸಭೆಯನ್ನು ಮಾನ್ಯ ಶ್ರೀನಿವಾಸ್ ಅವರು ನೋಡಿದ್ದಾರೆ ಎಂದು ಅನ್ನಿಸುತ್ತದೆ. ಎರಡೂ ಭಾಗಗಳ ಮಧ್ಯೆ ಒಂದು ಸಣ್ಣ ಟೇಬಲ್ ಮಾತ್ರ ಇದೆ ಎಂದು ತಿಳಿದಿದ್ದೇನೆ. ಇಂಗ್ಲೀಷ್‌ನವರ ಚಕ್ರಾಧಿಪತ್ಯ ಇದ್ದಾಗ ಅದನ್ನು ಕಟ್ಟಿಸಿರತಕ್ಕದ್ದು. ಹೌಸ್ ಆಫ್ ಕಾಮನ್ಸ್‌ನಲ್ಲಿ ಎಲ್ಲಾ ಸದಸ್ಯರೂ ಬಂದರೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ, ಬರೀ ಬೆಂಚುಗಳು ಇವೆ ಎಂದು ಕೇಳಿದ್ದೇನೆ. ಮಾನ್ಯ ಸದಸ್ಯರಾದ ಕೆ.ಹೆಚ್. ಪಾಟೀಲರೂ ಸಹ ಎಲ್ಲಾ ಸದಸ್ಯರೂ ಬಂದರೆ ಅಲ್ಲಿ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳಿದಂಥ ಮಾತು ನೆನಪಿಗೆ ಬರುತ್ತದೆ. ಇನ್ನು ಕುದುರೆ ಜೂಜು ಬಹಳ ಜೋರಾಗಿ ನಡೆಯುತ್ತದೆ ಎಂದು ಕೇಳಿದ್ದೇನೆ ರೇಸ್‌ಗೆ ಹೋಗುವಂಥಾದ್ದಕ್ಕೆ ಆಗಲಿ, ಎಲ್ಲಿಗೆ ಹೋಗುವಂಥಾದ್ದಕ್ಕೆ ಆಗಲೀ ತುಂಬಾ ವ್ಯವಸ್ಥೆ ಇದೆ ಎಂದು ಕೇಳಿದ್ದೇನೆ. ಊಟ, ತಿಂಡಿ, ಎಲ್ಲಾ ತರಹದ ವ್ಯವಸ್ಥೆ ಇದೆ ಎಂದೂ ಕೇಳಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದು ಎಲ್ಲರಿಗೂ ಅಲ್ಲ.

ಅಧ್ಯಕ್ಷರು.—ದಯವಿಟ್ಟು ಮಾನ್ಯ ಸದಸ್ಯರು ಈ ವಿಷಯಕ್ಕೆ ಸಂಬಂಧಪಟ್ಟ ವಿಚಾರ ಹೇಳಬೇಕೂ.

ಶ್ರೀ ಎಸ್. ಬಂಗಾರಪ್ಪ.—ಒಂದು ಸಾರಿ ದರ್ಬಿ ರೇಸ್‌ಗೆ ಎಲ್ಲರೂ ಹೋಗಿದ್ದಂಥ ಸಂದರ್ಭದಲ್ಲಿ ಕನ್‌ಸರ್‌ವೇಟೀವ್ ಗವರ್ನ್‌ಮೆಂಟ್ ಇದ್ದಾಗ ಇಂಪಾರ್ಟೆಂಟ್ ಬಿಲ್ ಮೇಲೆ ಓಟು ಆಗುವಂಥ ಸಂದರ್ಭದಲ್ಲಿ ಎಲ್ಲರೂ ಅಲ್ಲಿಗೆ ಅರ್ಧ ಗಂಟೆಯಲ್ಲಿ ಬಂದು ತಲುಪಿದರು ಎಂದು ಕೇಳಿದ್ದೇನೆ. ನಮ್ಮ ಪಾರ್ಲಿಮೆಂಟ್ ಹೌಸ್ ಕೂಡ ನೋಡಿದ್ದೇನೆ. ಹಿಂದಿನ ಜನಸಂಖ್ಯೆಗೆ ಅನುಗುಣವಾಗಿ ಕಟ್ಟಿದಂಥ ಕಟ್ಟಡ ಅದು. ನಿಮ್ಮ ರೆಸಲ್ಯೂಷನ್‌ಗೆ ಆನಂತರ ನಾನು ಬರುತ್ತೇನೆ.

೩-೦೦ ಪಿ.ಎಂ.

ನಮ್ಮ ಪಾರ್ಲಿಮೆಂಟ್ ಹೌಸನ್ನು ನಮ್ಮ ಸದನಕ್ಕೆ ಹೋಲಿಸಿದರೆ, ನಾವು ನೂರು ಭಾಗ ಚೆನ್ನಾಗಿದ್ದೇವೆ. ಇಂಥ ಒಂದು ಅಚ್ಚುಕಟ್ಟಾದ ವ್ಯವಸ್ಥೆಯನ್ನು ಇಟ್ಟುಕೊಂಡು ಅದನ್ನು ನಡೆಸಿಕೊಂಡು ಹೋಗುತ್ತಿದ್ದೇವೆ. ಇದೇ ಒಂದು ವ್ಯವಸ್ಥೆಯನ್ನು ಆ ಸದನಕ್ಕೂ ಕೊಟ್ಟಿದ್ದೇವೆ ಆ ಸದನದ ಬಗ್ಗೆ ಹಲವಾರು ಸಾರಿ ವಿಷಯಗಳು ಬಂದಿವೆ. ಆ ಸದನ ಇರಬೇಕೆ ಬಿಡಬೇಕೆ ? ಮುಂದುವರಿಸಬೇಕೇ, ಮುಂದುವರಿಸಬಾರದೆ, ಹೀಗೆ ಬಂದಿದ್ದು ಉಂಟು. ಈ ಸದನದ ಸ್ಥಾನಗಳು ೨೨೪ ಆದ ಮೇಲೆ

ಆ ಸದನದ ಸ್ಥಾನಗಳು ಅಂದರೆ ಮೂರನೆಯ ಒಂದು ಭಾಗ ಅಂದರೆ ೭೫ ಸ್ಥಾನಗಳು ಇನ್ನು ೧೨ ಸ್ಥಾನಗಳನ್ನು ಜಾಸ್ತಿ ಮಾಡತಕ್ಕ ನಿಮ್ಮ ಜ್ಞಾನೋದಯ ಯಾವಾಗ ಪ್ರಾರಂಭವಾಯಿತು ಎನ್ನುವುದೇ ಪ್ರಮುಖವಾದ ಪ್ರಶ್ನೆ ? ತಾವು ೮೩ರಲ್ಲಿ ಅಧಿಕಾರಕ್ಕೆ ಬಂದಿರಿ, ಆಗ ಮಾಡಬಹುದಿತ್ತು ? ಇದನ್ನು ಅಬಾಲಿಷನ್ ಮಾಡುತ್ತೇವೆಂದು ಹೇಳಿದ್ದಿರೋ ಬಿಟ್ಟಿದ್ದಿರೋ ಆ ವಿಚಾರ ಬೇರೆ. ಮಾನ್ಯ ವೀರಪ್ಪ ಮೊಯಿಲಿಯವರು ಮೇಲ್ಮನೆಯನ್ನು ಅಬಾಲಿಷ್ ಮಾಡುತ್ತೇವೆಂದು ಒಳಗಡೆ ಮತ್ತು ಹೊರಗಡೆ ಹೇಳಿದುದ್ದು ನೆನಪು ಇದೆ ಎಂದು ಹೇಳುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈ ರೀತಿ ಅಭಾವಗಳಿಂದ ತೋರಿಸಿದರೆ ಏನು ಗೊತ್ತಾಗುತ್ತದೆ. ನಾವು ಬಾಯಿಬಿಟ್ಟಾಗಲೀ, ಬಾಯಿ ತುಂಬಾ ಆಗಲೀ ಮೇಲ್ಮನೆಯನ್ನು ರದ್ದು ಮಾಡುತ್ತೇವೆನ್ನುವ ಚಿಂತನೆ ನಮ್ಮ ವಲಯದಲ್ಲಿ ಇರಲಿಲ್ಲ. ಅಂಥ ಊಹಾಪೋಹಗಳು ನಮ್ಮಲ್ಲಿ ಇರಲಿಲ್ಲ ಬೇರೆ ಕಡೆ ಇದ್ದವೋ ಏನೋ ನನಗೆ ಗೊತ್ತಿರಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಊಹಾ ಪೋಹ ಬೇರೆ ಕಡೆ ಎಂದು ಹೇಳಿದ್ದಾರೆ. ನಮ್ಮ ಕಡೆಗೆ ಅಂತ ಹೇಳಲಿಲ್ಲ. ೬೩ ಸ್ಥಾನಗಳಿಂದ ೭೫ ಸ್ಥಾನಗಳಿಗೆ ಏರಿಸುವಂಥ ೧೨ ಸ್ಥಾನಗಳನ್ನು ಹೆಚ್ಚಿಸುವಂಥ ವಿಚಾರ. ಜ್ಞಾನೋದಯವಾಗಿರತಕ್ಕಂಥದ್ದು ಇತ್ತೀಚೆಗೆ ಮಾತ್ರ. ಇಲ್ಲಿಯವರೆಗೆ ಮೇಲ್ಮನೆಯಲ್ಲಿ ಜನತಾಪಕ್ಷಕ್ಕೆ ಬಹುಮತ ಇರಲಿಲ್ಲ.

ಶ್ರೀ ಲಕ್ಷ್ಮೀಸಾಗರ್.—ಜೂನ್‌ಗೆ ಬರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಬಹುಮತ ಬರತಕ್ಕಂಥ ಸಂದರ್ಭ ಬರಬಹುದು ಆದರೆ, ಇವೊತ್ತಿಗೂ ಬಹುಮತ ಅಲ್ಲಿ ಇಲ್ಲ. ಮೇಲ್ಮನೆಯಲ್ಲಿ ಬಹಳ ಯಾತನೆಪಟ್ಟು, ತೊಂದರೆ ತೆಗೆದುಕೊಂಡು, ನೋವನ್ನು ಅನುಭವಿಸಿ, ಕಣ್ಣೀರು ಹಾಕತಕ್ಕಂಥ ಮಟ್ಟಕ್ಕೆ ಇವರು ಬಂದರು. ಇನ್ನಾದರೂ ಕಾರ್ಯಕಲಾಪಗಳ ದೃಷ್ಟಿಯಿಂದ, ಕಣ್ಣೀರು ಹಾಕತಕ್ಕಂಥ ಪರಿಸ್ಥಿತಿ ಬೇಡ, ಬಹುಮತ ಇಟ್ಟುಕೊಳ್ಳಬೇಕೆಂಬ ಅಭಿಪ್ರಾಯಂಕ್ಕೆ ಈಗ ಬಂದಿದ್ದಾರೆ. ಈ ಸ್ಥಾನಗಳನ್ನು ಹೆಚ್ಚು ಮಾಡುವಂಥ ಕೆಲಸವನ್ನು ಹಿಂದೆಯೇ ಏತಕ್ಕೆ ಇವರು ಮಾಡಲಿಲ್ಲ? ಇವತ್ತು ಅಧಿಕಾರದಲ್ಲಿರುವಂಥ ಪಕ್ಷ ಈ ಸಮಸ್ಯೆಯನ್ನು ಎದುರಿಸುವುದಕ್ಕೆ ಸಿದ್ಧವಾಗಿರಬೇಕಾಗುತ್ತದೆ. ಒಂದು ವಿಚಾರದಲ್ಲಿ ವಿರೋಧ ಬಂದರೆ, ಕಾನೂನು ಇದೆ.ನಿರ್ಣಯ ಬಿದ್ದು ಹೋದರೆ ಮಸೂದೆ ಬಿದ್ದು ಹೋದರೆ ಮತ್ತೊಮ್ಮೆ ಪಾಸುಮಾಡಿಕೊಳ್ಳುವುದಕ್ಕೆ ಅಧಿಕಾರ ಇದೆ. ಮೇಲ್ಮನೆಯಲ್ಲಿ ಬಜೆಟ್ ಪಾಸು ಮಾಡಿಕೊಡದಿದ್ದರೂ ಕೂಡ ೧೪ ದಿವಸದ ನಂತರ ಕೆಳಮನೆಯಲ್ಲಿ ತಂದು ಮತ್ತೆ ಪಾಸು ಮಾಡಿಕೊಳ್ಳುವುದಕ್ಕೆ ಅವಕಾಶ ಇದ್ದರೂ ಕೂಡ ಅವರ ಬಗ್ಗೆ ಯೋಚನೆ ಮಾಡದೆ ಆರಾಮವಾಗಿರತಕ್ಕಭಾವನೆಯಿಂದ ಅಧಿಕಾರ ಮತ್ತು ದಾಹದ ವ್ಯಾಪ್ತಿಯಿಂದ ಏನಾದರೂ ಮಾಡಿ, ಮೇಲ್ಮನೆಯ ಸ್ಥಾನದ ಸಂಖ್ಯೆಗಳನ್ನು ಜಾಸ್ತಿಮಾಡಿಕೊಳ್ಳುವಂಥ ಒಂದು ಕಾನೂನನ್ನು ಮಾನ್ಯ ಲಕ್ಷ್ಮೀಸಾಗರ್‌ರವರು ಹುಡುಕಿಕೊಟ್ಟಿದ್ದಾರೆಂದು ಕಾಣುತ್ತದೆ. ಈ ಅಂಶವನ್ನು ರಾಜ್ಯಾಂಗಬದ್ಧವಾಗಿ ಜನತಾ ಪ್ರತಿನಿಧಿಗಳ ಕಾಯಿದೆಯಲ್ಲಿರತಕ್ಕ ಹಾಗೆ ಉಪಯೋಗ ಮಾಡಿಕೊಳ್ಳಿ. ಸ್ಥಾನಗಳನ್ನು ಜಾಸ್ತಿ ಮಾಡಿಕೊಳ್ಳುವುದಾದರೆಮಾಡಿಕೊಳ್ಳಿ ಆದರೆ, ರಾಜ್ಯದಲ್ಲಿ ಭೀಕರವಾದಂಥ ಬರಗಾಲ ಇರತಕ್ಕ ಸಂದರ್ಭದಲ್ಲಿ ಜಾಸ್ತಿ ಮಾಡುವುದು ಸರಿಯಲ್ಲ. ಇರತಕ್ಕ ೬೩ ಸ್ಥಾನಗಳನ್ನೇ ತುಂಬುವುದಕ್ಕೆ ನಿಮ್ಮಿಂದ ಆಗಿಲ್ಲ ಳಿದ ಸ್ಥಾನಗಳು ಇದ್ದು, ೨೧ ಸ್ಥಾನಗಳು ಖಾಲಿ ಇವೆ. ಕಳೆದ ನಾಲ್ಕು ವರ್ಷದಿಂದ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಯಾಗಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ೨೧ ಸ್ಥಾನಗಳಿಗೆ ಚುನಾವಣೆ ಮಾಡಬೇಕೆಂದು ಎಲೆಕ್ಷನ್ ಕಮೀಷನ್‌ಗೆ ಪತ್ರ ಬರೆದಿದ್ದೇವೆ. ದಿವಂಗತ ದೇವರಾಜ್ ಅರಸು ಅವರ ಕಾಲದಿಂದಲೂ ಇದೇ ಪರಿಸ್ಥಿತಿ ಮುಂದುವರಿದುಕೊಂಡು ಬಂದಿದೆ. ಚುನಾವಣೆ ಕಮೀಷನ್‌ನಿಂದ ಉತ್ತರ ಬಂದಿಲ್ಲ ಚುನಾವಣೆ ಮಾಡುವುದಕ್ಕಾಗಿಲ್ಲ. ಆಂಧ್ರ ಪ್ರದೇಶದಲ್ಲಿ ಚುನಾವಣೆ ಮಾಡುವುದಕ್ಕೆ ಅವಕಾಶ ಕೊಟ್ಟರು, ಚುನಾವಣೆ ಮಾಡಿದಮೇಲೆ ಆಂಧ್ರ ಪ್ರದೇಶ ಸರ್ಕಾರದವರು ವಿಧಾನ ಪರಿಷತ್ತನ್ನು ರದ್ದು ಮಾಡಬೇಕೆಂಬ ನಿರ್ಣಯ ಮಾಡಿದರು ತಪ್ಪು ನಮ್ಮ ಕಡೆ ಇಲ್ಲ. ನಾವು ಪ್ರಯತ್ನ ಮಾಡುತ್ತಲೇ ಇದ್ದೇವೆ. ಅವಕಾಶ ಸಿಕ್ಕಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ಕರ್ನಾಟಕ ವಿಧಾನ ಸಭೆಯ ನಿಯಮ ೧೪೫ರ ಪ್ರಕಾರ ೭ ದಿವಸ ಮುಂಚಿತವಾಗಿ ನೋಟೀಸ್ ಕೊಡಬೇಕೆಂದು ಇದೆ, ಅವರು ಹಾಗೆ ನೋಟೀಸ್ ಕೊಟ್ಟಿಲ್ಲ.

ಅಧ್ಯಕ್ಷರು.—ಅದನ್ನು ವೇವ್ ಮಾಡುವುದಕ್ಕೆ ಅಧಿಕಾರ ಇದೆ.

ಶ್ರೀ ಆರ್. ವೆಂಕಟರಾಮಯ್ಯ.—೭ ದಿವಸ ಮುಂಚಿತವಾಗಿ ನೋಟೀಸ್ ಕೊಡಬೇಕೆಂದು ಕ್ಲಿಯರ್ ಆಗಿ ಇದೆ.

ಶ್ರೀ ಎಸ್. ಬಂಗಾರಪ್ಪ.—ಶ್ರೀಮಾನ್ ವೆಂಕಟರಾಮಯ್ಯನವರು ಇಂತಹ ನಿರ್ಣಯವನ್ನು ಮಂಡಿಸಬೇಕಾದರೆ, ೭ ದಿವಸಗಳ ಮುಂಚೆ ನೋಟೀಸ್ ಕೊಡಬೇಕೆಂದು ಹೇಳಿದರು. ಇಲ್ಲ ಅಂದರೆ ಬಹುಮತ ಇದೆ ಎಂದು ಮಾತನಾಡಬೇಕು ಎಂದರೆ ಮಾತನಾಡಬಹುದು ಎಂಬುದಾಗಿಯೂ ಹೇಳಿದರು ಇದರ ಬಗ್ಗೆ ತಾವು ರೂಲಿಂಗ್‌ನ್ನು ಕೊಡಬೇಕು. ೭ ದಿವಸಗಳು ಮುಂಚಿತವಾಗಿ ನೋಟೀಸ್ ಕೊಡುವ ವಿಚಾರದಲ್ಲಿ ತವಕಕ್ಕೆ ಅಧಿಕಾರ ಇದೆ. ಇವೊತ್ತು ನಮ್ಮ ಮುಂದಿರತಕ್ಕಂತಹ ಪ್ರಶ್ನೆ ೬೫ ಜನ ಸದಸ್ಯರು ಇರತಕ್ಕಂತಹ ಮೇಲ್ಮನೆಯ ಸದಸ್ಯರ ಸಂಖ್ಯೆಯನ್ನು ೭೫ಕ್ಕೆ ಏರಿಸಬೇಕೆಂಬುದು. ೧೨ ಜನ ಸದಸ್ಯರನ್ನು ಹೆಚ್ಚು ಮಾಡಿ ಹಣವನ್ನು ಖರ್ಚು ಮಾಡುವಂಥ ಅವಶ್ಯಕತೆ ಈಗ ಏನು ಇದೆ ಎನ್ನುವುದು ನಮ್ಮ ಮುಂದಿರತಕ್ಕಂಥ ಪ್ರಶ್ನೆ. ಭೀಕರ ಬರಗಾಲ ಇರತಕ್ಕಂಥ ಸಂದರ್ಭದಲ್ಲಿ, ಹಣವೇ ಇಲ್ಲದೆ ಇರತಕ್ಕಂಥ ಸಂದರ್ಭದಲ್ಲಿ ಇದರ ಅವಶ್ಯಕತೆ ಏನು ಇದೆ ಎಂಬುದನ್ನು ನಾವು ಪ್ರಶ್ನೆ ಮಾಡಬೇಕಾಗಿದೆ. ಹಿಂದೆ ನೀವು ಆ ಮನೆಯಲ್ಲಿ ತೊಂದರೆಯನ್ನು ಅನುಭವಿಸಿದ್ದೀರಿ. ಆದರೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ನಿಮ್ಮ ಪಕ್ಷಕ್ಕೆ ಬಹುಮತ ಬಂದಿದೆ. ಅಂತಹ ಸಂದರ್ಭದಲ್ಲೂ ಈ ರೀತಿ ಸದಸ್ಯರ ಸಂಖ್ಯೆಯನ್ನು ಹೆಚ್ಚು ಮಾಡುವುದಕ್ಕೆ ಹೊರಟಿರುವಂಥ ಉದ್ದೇಶವಾದರೂ ಏನು ? ಮೊದಲೇ ಭೀಕರ ಬರಗಾಲ ರಾಜ್ಯದಲ್ಲಿ ಇದೆ. ಮುಂದೆ ಚೆನ್ನಾಗಿ ಮಳೆಯಾಗಿ, ಬೆಳೆಗಳು ಕೈಗೆ ಸಿಕ್ಕಿದಂತಹ ಸಂದರ್ಭ ಬಂದಾಗ ಇದರ ಬಗ್ಗೆ ಯೋಚನೆ ಮಾಡಬಹುದಿತ್ತು.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದರ ಬಗ್ಗೆ ಇಷ್ಟೊಂದು ಧೀರ್ಘವಾದ ಚರ್ಚೆಯ ಅವಶ್ಯಕತೆ ಇಲ್ಲವೆಂದು ನಾನು ತಿಳಿದಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಏಕೆ ? ಬಹಳ ಅವಶ್ಯಕತೆ ಇದೆ ಎಂಬುದಾಗಿ ನಾವು ತಿಳಿದಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಇದರ ಬಗ್ಗೆ ನಮ್ಮ ಅಭಿಪ್ರಾಯವನ್ನು ಹೇಳಬೇಕಾಗುತ್ತದೆ. ರಾಜ್ಯಾಂಗದ ಪ್ರಕಾರ ಪ್ರತಿಯೊಬ್ಬರಿಗೂ ಪ್ರಾತಿನಿಧ್ಯ ಸಿಕ್ಕತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು ನಿಜ ಬಹುಮತವನ್ನು ಹೇಗಾದರೂ ಪತ್ತೆದುಕೊಳ್ಳುತ್ತೀರಿ. ಆದರೆ ಬಹುಮತವನ್ನು ಹೆಚ್ಚು ಮಾಡುವ ಉದ್ದೇಶದಿಂದ ಮಾಡಬೇಕಾಗಿದ್ದರೆ, ೨ ವರ್ಷಗಳ ಹಿಂದೆಯೇ ಮಾಡಬಹುದಾಗಿತ್ತು. ಮೊನ್ನೆಯ ಚುನಾವಣೆಯಲ್ಲಿ ಹೇಗೋ ಬಹುಮತವನ್ನು ಗಳಿಸಿದ್ದೀರಿ. ಬಹುಮತ ಪಡೆಯುವ ದೃಷ್ಟಿಯಿಂದ ಮಾಡಬೇಕಾಗಿದ್ದರೆ, ಖಾಲಿ ಇರುವ ೨೧ ಸ್ಥಾನಗಳಿಗೆ ಚುನಾವಣೆಯನ್ನೇ ಮಾಡಿಲ್ಲವಲ್ಲ. ಆ ಸ್ಥಾನಗಳಿಗೆ ಮೊದಲು ಚುನಾವಣೆ ಮಾಡಿ. ಚುನಾವಣೆಯಾದಾಗ ಯಾರಿಗೆ ಹೆಚ್ಚು ಬರಬೇಕೋ ಬರುತ್ತದೆ, ಇವೊತ್ತು ನೀವು ಅಧಿಕಾರದಲ್ಲಿರಬಹುದು. ನಾಳೆ ನಾವು ಅಧಿಕಾರಕ್ಕೆ ಬರಬಹುದು. ಆ ಪ್ರಶ್ನೆಯಲ್ಲ ಸಾರ್ವಜನಿಕವಾಗಿ ಎಲ್ಲರಿಗೂ ಪ್ರಾತಿನಿಧ್ಯವನ್ನು ಕೊಡತಕ್ಕಂತಹ ವಿಚಾರ ಏನಿದೆ, ಅದರಲ್ಲೂ ರಾಜ್ಯಾಂಗದ ಪ್ರಕಾರ ಅದನ್ನು ಏಕೆ ಉಪಯೋಗ ಮಾಡಿಕೊಳ್ಳಬಾರದೂ ಎಂಬ ಅಭಿಪ್ರಾಯವನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಇದರಲ್ಲಿ ಹಣಕಾಸಿನ ವಿಚಾರ ಕೂಡ ಬರುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಹಣಕಾಸಿನ ವಿಚಾರ ಇದ್ದರೂ, ರಾಜ್ಯದಲ್ಲಿರುವ ಬರಗಾಲ ಖಾಯಂ ಬರಗಾಲವೇನಲ್ಲ. ಇದು ಕೇಂದ್ರ ಸರ್ಕಾರಕ್ಕೆ ಹೋಗಬೇಕಾಗುತ್ತದೆ. ಅಲ್ಲಿಂದ ಒಪ್ಪಿಗೆಯಾಗಿ ಬರಬೇಕಾದರೆ ಇನ್ನೂ ಒಂದು ವರ್ಷವಾದರೂ ಆಗುತ್ತದೆ.

ಅಧ್ಯಕ್ಷರು.—ಸಾಕಷ್ಟು ಅವಕಾಶ ಇದೆ. ತಾವು ಮುಕ್ತಾಯ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ಪ್ರಾರಂಭದಲ್ಲಿಯಾದರೂ ಕಾರ್ಯಕ್ರಮಗಳನ್ನು ಮುಗಿಸಬೇಕೆಂಬ ಉದ್ದೇಶದಿಂದ ತಾವು ಆ ರೀತಿ ಹೇಳುವುದು ಸರಿ. ಆದರೆ ಇವೊತ್ತು ಕೊನೆಯ ದಿವಸ ಬೇಗ ಮುಗಿಸಿ ಎಂಬುದಾಗಿ ತಾವು ಹೇಳಬಾರದು.

ಶ್ರೀ ಜಿ. ನಾರಾಯಣಕುಮಾರ್.—ವಿರೋಧ ಪಕ್ಷದ ನಾಯಕರು ಬಹಳ ನಗುಮುಖದಿಂದ ಇದ್ದಾರೆ. ಒಳ್ಳೆಯ ಸೂಟ್ ಹಾಕಿಕೊಂಡು ಮದುವೆ ಗಂಡಿನ ಹಾಗೆ ಇದ್ದಾರೆ.

ಸದಸ್ಯರೊಬ್ಬರು.—ಕೊನೆಯ ದಿವಸವೆಂದು ಕಪ್ಪು ಸೂಟು ಧರಿಸಿ ಬಂದಿದ್ದಾರೆ, ಬಹಳ ಆಶ್ಚರ್ಯವೆಂದು ನನಗನ್ನಿಸುತ್ತಿದೆ.

ಅಧ್ಯಕ್ಷರು.—ಅವರು ಬಹಳ ಸಂತೋಷದಿಂದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮತ್ತೊಮ್ಮೆ ನನ್ನನ್ನು ಮದುವೆ ಗಂಡನ್ನಾಗಿ ಮಾಡಿದ್ದಕ್ಕೆ ತವರಿಗೆ ಅಭಿನಂದನೆಗಳು.

ಶ್ರೀ ಎ. ಲಕ್ಷ್ಮೀಸಾಗರ್.—ಆ ರೀತಿ ಹೇಳುವುದೂ ಕೂಡ ಐ.ಪಿ.ಸಿ. ಸೆಕ್ಷನ್ ೪೯೮-೪೯೬ರ ಪ್ರಕಾರ ಅಪರಾಧವಾಗುತ್ತದೆ.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಮಂತ್ರಿಗಳಿಗೆ ಮದುವೆಯ ವಿಷಯವೇ ಗೊತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮಲ್ಲಿರತಕ್ಕಂತಹ ಇಬ್ಬರೂ ಕೊನೆಗೂ ಮದುವೆ ಗಂಡು ಆಗುವ ಹಾಗೆ ಕಾಣುವುದಿಲ್ಲ. ಆದ್ದರಿಂದ ಸೂಟನ್ನಾದರೂ ನೀವು ಅವರಿಗೆ ಒಲಿಸಿಕೊಟ್ಟು, ಅದನ್ನು ಅವರು ಹಾಕಿಕೊಂಡು ಬಂದ ಮೇಲೆ ಮದುವೆ ಗಂಡು ಎಂಬುದಾಗಿ ಹೇಳಿಕೊಂಡು ಸಂತೋಷಪಡಿ. ಪ್ರಜಾತಂತ್ರದ ಬಗ್ಗೆ ಇವರು ಬಹಳ ಮಾತನಾಡುತ್ತಾರೆ. ೬೩ ಜನರು ಇದ್ದಾಗ ಪ್ರಜಾಪ್ರಭುತ್ವ ನಡೆಯಬೇಕಾದ್ದು ೭೫ ಜನರನ್ನಾಗಿ ಮಾಡಿದಾಗಿ ಪ್ರಜಾಪ್ರಭುತ್ವ ನಡೆಯುತ್ತದೆ ಎಂಬ ಅಭಿಪ್ರಾಯ ತಮಗೆ ಏಕೆ ಬಂತು ? ಮಾನ್ಯ ಕಂದಾಯ ಸಚಿವರು ಹಣ ಇಲ್ಲ ಹಣ ಇಲ್ಲ ಎಂಬುದಾಗಿ ಹೇಳುತ್ತಿರುವ ಸಂದರ್ಭದಲ್ಲಿ ಈ ಬಗ್ಗೆ ನಿಮ್ಮ ಚಿಂತನೆ ಏಕೆ ಬಂತು ? ಮಾನ್ಯ ಮುಖ್ಯಮಂತ್ರಿಗಳೂ ಇಪ್ಪೊತ್ತು ಇಲ್ಲ. ಅವರು ಇದ್ದಿದರೆ ಸರಿಯಾಗಿ ಹೇಳಬಹುದಿತ್ತು. ಅವರಿಗೆ ಆರೋಗ್ಯ ಸರಿ ಇಲ್ಲ. ಅವರ ಆರೋಗ್ಯ ಬೇಗ ಸುಧಾರಿಸಲಿ ಎಂಬುದಾಗಿ ಈ ಸಭೆಯ ಮುಖಾಂತರ ಹಾರೈಸುತ್ತೇನೆ. ಈ ಸಾರಿ ಅವರು ಈ ಸದನದಲ್ಲಿ ಕಂಳಿತಂಕೊಂಡಿದ್ದೇ ಬಹಳ ಅಪರೂಪ. ಸಭೆ ನಡೆಯುತ್ತಿರುವಾಗ ಸಭೆಯಲ್ಲೇ ಹಾಜರಿದ್ದು, ಸದಸ್ಯರು ಮಾತನಾಡುವಂಥ ವಿಚಾರಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಕೇಳಬೇಕು. ಸದನ ನಡೆಯುತ್ತಿರಬೇಕಾದರೆ ಅನೇಕ ಸಲ ರಾಜ್ಯದ ಹೊರಗಡೆ ಅವರು ಪ್ರವಾಸ ಹೋಗಿದ್ದುದು ಎಲ್ಲರಿಗೆ ಗೊತ್ತಿರತಕ್ಕಂಥ ವಿಚಾರ, ಬರಗಾಲವಿರುವಂಥ ಈ ಸಂದರ್ಭದಲ್ಲಿ ಇಂತಹ ವಿಚಾರಗಳನ್ನು ಸದನದ ವಂಂದೆ ಇಡತಕ್ಕಂತಹ ಯೋಚನೆಯೂ ನಿಮ್ಮ ಹತ್ತಿರ ಬರಬಾರದು. ಕೇಂದ್ರ ಸರ್ಕಾರದ ಹತ್ತಿರ ಹಣ ಇಲ್ಲ ಹಣ ಇಲ್ಲವೆಂದು ಬೊಬ್ಬೆ ಹೊಡೆಯುತ್ತಿದ್ದೀರಿ. ಅಂತಹ ಸಂದರ್ಭದಲ್ಲಿ ಇಂತಹ ವಿಚಾರ ಕೇಂದ್ರ ಸರ್ಕಾರಕ್ಕೆ ಹೋದರೆ ಅವರು ಹೇಗೆ ಇದಕ್ಕೆ ಅವಕಾಶ ಕೊಡುತ್ತಾರೆ ? ನಾವು ಅದಕ್ಕಾಗಿ ಇದನ್ನು ವಿರೋಧ ಮಾಡುತ್ತಿದ್ದೇವೆ. ಈ ಸಾರಿ ನಡೆದ ಚುನಾವಣೆಯಲ್ಲಿ ಹೇಗೋ ಬಹುಮತವನ್ನು ಗಳಿಸಿಕೊಂಡಿದ್ದೀರಿ. ಮತ್ತೂ ಸದಸ್ಯರ ಸಂಖ್ಯೆಯನ್ನು ಹೆಚ್ಚು ಮಾಡುವಂತಹ ಅವಶ್ಯಕತೆಯಾದರೂ ಏನು ಇದೆ ? ಆದ್ದರಿಂದ ಈ ಒಂದು ಸಂದರ್ಭದಲ್ಲಿ ಮೇಲ್ಮನೆಯ ಸದಸ್ಯರ ಸಂಖ್ಯೆಯನ್ನು ಜಾಸ್ತಿ ಮಾಡತಕ್ಕಂಥ ವಿಚಾರ ಧಾರೆಯನ್ನು ಸರ್ಕಾರ ಕೈಬಿಡಬೇಕು. ಜನತೆಯ ಹಿತದೃಷ್ಟಿಯಿಂದ ಹಾಗೂ ಸದ್ಯದ ಹಣಕಾಸಿನ ಪರಿಸ್ಥಿತಿಯಿಂದ ಇದನ್ನು ಕೈಬಿಡಬೇಕೆಂದು ಹೇಳುತ್ತಿದ್ದೇನೆ. ನಿಮಗೆ ಆ ಸದನದಲ್ಲಿ ಬಹುಮತ ಇಲ್ಲದಿದ್ದರೆ ಆ ಮಾತು ಬೇರೆ. ನಿಮ್ಮ ಪೂರ್ಣ ಉದ್ದೇಶವೇನೆಂದರೆ, ೧೨ ಜನ ಸದಸ್ಯರ ಸಂಖ್ಯೆಯನ್ನು ಜಾಸ್ತಿ ಮಾಡಿಕೊಂಡು ನಿಮ್ಮ ಪಕ್ಷದವರೆಲ್ಲರನ್ನೂ ತೆಗೆದುಕೊಂಡು ಹೋಗಿ ಅಲ್ಲಿ ಸದಸ್ಯರನ್ನಾಗಿ ಮಾಡಬೇಕೆಂದು ಹೊರಟಿದ್ದೀರಿ.

ಅಧ್ಯಕ್ಷರು.—ಅವರಿಗೆ ೯ ಸೀಟು ಹೋಗುತ್ತದೆ, ನಿಮಗೆ ಮೂರು ಬರುತ್ತವೆ.

ಶ್ರೀ ಎಸ್. ಬಂಗಾರಪ್ಪ.—ಇದರಿಂದ ಅನ್ಯಾಯವಾಗುವುದಿಲ್ಲವೆ ? ಅವರಿಗೆ ೯ ಸೀಟು, ನಮಗೆ ೩ ಸೀಟು ಬಂದರೆ ಇದರಿಂದ ಸಂತೋಷಪಟ್ಟುಕೊಳ್ಳುವುದಕ್ಕಾಗುತ್ತದೆಯೇ ? ನಮಗೆ ೯ ಸೀಟು ಬಂದಿದ್ದು ಅವರಿಗೆ ೩ ಸೀಟು ಹೋಗಿದ್ದರೆ ಸಮಾಧಾನಪಟ್ಟುಕೊಳ್ಳಬಹುದಾಗಿತ್ತು. ಜೊತೆಗೆ ೧೨ ಸೀಟುಗಳನ್ನು ಏನು ಜಾಸ್ತಿ ಮಾಡುತ್ತಿದ್ದಾರೆ, ಅಷ್ಟೂ ಈ ಸದನದಿಂದ ಆರಿಸಿ ಹೋಗುವಂತಹವುಗಳಲ್ಲ

ಅಧ್ಯಕ್ಷರು.—ಮೊನ್ನೆ ನಡೆದ ಚುನಾವಣೆಯಲ್ಲಿ ಅವರು ಮೂರು ಸ್ಥಾನಗಳನ್ನು ತೆಗೆದುಕೊಂಡರು ನೀವು ಒಂದನ್ನು ತೆಗೆದುಕೊಂಡಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ತಂಪ್ಪಿಯಂನ್ನು ಜಾಸ್ತಿ ಮಾಡಿಕೊಳ್ಳತಕ್ಕಂಥದ್ದು ಒಳ್ಳೆಯದಲ್ಲ. ಅದು ಸಮಂಜಸವೂ ಅಲ್ಲ. ಈಗಿರತಕ್ಕಂತಹ ಪರಿಸ್ಥಿತಿಯಲ್ಲಿ ಇಂತಹ ವಿಚಾರಧಾರೆ ನಮ್ಮ ಹತ್ತಿರವೂ ಬರಬಾರದು, ಆದ್ದರಿಂದ ಈ ಒಂದು ನಿರ್ಣಯವನ್ನು ಸಂಪೂರ್ಣವಾಗಿ ಪಕ್ಷದ ಪರವಾಗಿ ಹಾಗೂ ನನ್ನ ಪರವಾಗಿ ಸ್ಪಷ್ಟವಾಗಿ ವಿರೋಧ ಮಾಡುತ್ತೇನೆ, ಇದನ್ನು ಮಾಡತಕ್ಕಂಥ ಅವಶ್ಯಕತೆ ಇಲ್ಲವೆಂದು ಹೇಳುತ್ತಾ ನನ್ನ ಮಾತಂಗಳನ್ನು ಮುಂಗಿಸಂತ್ತೇನೆ.

† ಶ್ರೀ ಆರ್. ವೆಂಕಟರಾವಯ್ಯ (ಮುಳಬಾಗಲು ಕ್ಷೇತ್ರ).—ರಾಜ್ಯಾಂಗದ ಚಾಪ್ಟರ್ ೩ರಲ್ಲಿ, Article 168 (1) says.

"Constitution of Legislatures in States.

For every State, there shall be a Legislature which shall consist of the Governor and (a) in the States of Andra Pradesh, Bihar, Tamil Nadu, Maharashtra, Karnaraka and U.P., two houses," ಅಲ್ಲಿಗೆ ೫ ರಾಜ್ಯಗಳಲ್ಲಿ ಮಾತ್ರ ಈ ಮೇಲ್ಮನೆ ಇದೆ, ಎಲ್ಲಾ ಬೇರೆ ರಾಜ್ಯಗಳಲ್ಲಿ ಇದನ್ನು ರದ್ದು ಮಾಡಿದ್ದಾಕೆ. ಈ ರಾಜ್ಯದಲ್ಲೂ ಮೇಲ್ಮನೆಯನ್ನು ರದ್ದು ಮಾಡ ಬೇಕೆಂಬುದು ನನ್ನ ಸ್ಪಷ್ಟ ಅಭಿಪ್ರಾಯ. ಇದಕ್ಕೆ ಒಂದು ಲೀಗಲ್ ಸ್ಯಾಂಕ್ಷನ್ ಇದೆ. ಜಿಲ್ಲಾ ಪರಿಷತ್ತಿನ ತಿದ್ದುಪಡಿಯನ್ನು ತೆಗೆದುಕೊಂಡು ಬಂದಾಗ ೧೯೭೧ರ ಜನಗಣತಿಯನ್ನೇ ಆಧಾರವಾಗಿಟ್ಟು ಚುನಾವಣೆ ಯನ್ನು ಮಾಡಬೇಕೆಂದು ಹೇಳಿದ್ದಾರೆ. ಅದನ್ನು ಬಿಟ್ಟು ಯಾವುದೇ ಚುನಾವಣೆಯನ್ನು ಮಾಡಬಾರದು ಎಂಬುದಾಗಿ ಆರ್ಟಿಕಲ್ ೩೩೦ರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಏಕೆಂದರೆ ವಿಾಸಲಾತಿಯ ತೊಂದರೆ ಬರುತ್ತದೆ. ಆದ್ದರಿಂದಲೇ ೧೯೭೧ನೇ ಸಾಲಿನ ಜನಗಣತಿಯನ್ನೇ ಆಧಾರವಾಗಿಟ್ಟು ಚುನಾವಣೆಯನ್ನು ಮಾಡಬೇಕೆಂದು ತಿದ್ದಲ್ಲಿ ಸಂಸ್ಪಷ್ಟವಾಗಿ ಹೇಳಿದ್ದಾರೆ ಇದನ್ನು ೨೧೦೦ನೇ ಇಸವಿಯವರೆಗೂ ಬದಲಾವಣೆ ಮಾಡುವುದಕ್ಕಾಗುವುದಿಲ್ಲವೆಂದೂ ಕೂಡ ಹೇಳಿದ್ದಾರೆ.

"Provided that the reference in this EXPLANATION to the last preceeding census of which the relevant figures have been published shall, until the relevant figures for the first census taken after the year 2000 have been pubished, be construed, as a refernce to the 1971 census."

ಇದರ ಬಗ್ಗೆ ನಾನು ಖಾಸಗಿ ನಿರ್ಣಯವೊಂದನ್ನೂ ಕೂಡ ಮೂವ್ ಮಾಡಿದ್ದೇನೆ. ವಿಧಾನ ಪರಿಷತ್ತನ್ನು ಅಬಾಲಿಷ್ ಮಾಡಬೇಕು. ಏಕೆಂದರೆ ಇದು ೫ರುವುದೇ ೫ ರಾಜ್ಯಗಳಲ್ಲಿ ಇದ್ದಂತಹ ಎಲ್ಲಾ ರಾಜ್ಯಗಳಲ್ಲೂ ಇದನ್ನು ರದ್ದು ಮಾಡಿದ್ದಾರೆ ಇತ್ತೀಚೆಗೆ ಆಂಧ್ರ ಪ್ರದೇಶದಲ್ಲೂ ಕೂಡ ಮೇಲ್ಮನೆ ಯನ್ನು ರದ್ದು ಮಾಡಿದ್ದಾರೆ. ಜನತಾ ಪಕ್ಷದ ಸದಸ್ಯರು ಸಮಾಜವಾದದ ತತ್ವವನ್ನು ಒಪ್ಪಿ ಅದರ ಆಧಾರದ ಮೇಲೆ ಆರಿಸಿ ಬಂದಿದ್ದಾರೆ. ಅದರಂತೆ ಅವರು ನಡೆದುಕೊಳ್ಳುತ್ತಾರೆಂದು ನಾನು ಅಂದು ಕೊಂಡಿದ್ದೇನೆ. ಅದನ್ನು ಪಾಲಿಸುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಶ್ರೀಮಾನ್ ಲಕ್ಷ್ಮೀಸಾಗರ್ ರವರು ಮೊದಲು ಕಮ್ಯೂನಿಸ್ಟ್ ಪಾರ್ಟಿಯಲ್ಲಿದ್ದವರಂತಹವರು. ಈಗ ಜನತಾ ಪಾರ್ಟಿಯಲ್ಲಿದ್ದಾರೆ. ಇವರು ಪಿ. ಎಸ್. ಪಿ. ನಾಯಕರೂ ಕೂಡ ಆಗಿದ್ದರು. ಆದ್ದರಿಂದ ಅಂತಹವರು ಇದರ ಬಗ್ಗೆ ಯೋಚನೆ ಮಾಡುವುದು ಸರಿಯಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ವಸ್ತುಸ್ಥಿತಿ ವಿಚಾರವನ್ನು ಮಾನ್ಯ ಸದಸ್ಯರು ಹೇಳಲಿ. ಆದಕ್ಕೆ ನನ್ನ ಅಭ್ಯಂತರವಿಲ್ಲ. ಆದರೆ ಇಲ್ಲದೇ ಇರತಕ್ಕಂತಹ ವಿಚಾರವನ್ನು ಮಾನ್ಯ ಸದಸ್ಯರು ಹೇಳುವುದು ಬೇಡ.

† ಈ ಚಿಹ್ನೆಯು ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಶೀಲಿಸಿಲ್ಲ ಎಂದು ಸೂಚಿಸುತ್ತದೆ.

ನಾನು ಪಿ. ಎಸ್. ಪಿ. ಯಲ್ಲೂ ಇರಲಿಲ್ಲ. ಕಮ್ಯುನಿಷ್ಟ್ ಪಾರ್ಟಿಯಲ್ಲಿ ಮೊದಲೇ ಇರಲಿಲ್ಲ. ಇವರು ಒಂದೊಂದು ಸಾರಿ ಅದಕ್ಕೆ ಬಣ್ಣಕಟ್ಟಿ ಮಾತನಾಡುತ್ತಾರೆ.

ಶ್ರೀ ಎಂ. ರಾಮಪ್ಪ..—ವಕೀಲರು ಅಂದಮೇಲೆ ಯಾರು ರೊಕ್ಕ ಕೊಡುತ್ತಾರೆ, ಅವರ ಕಡೆ ಮಾತನಾಡುತ್ತಾರೆ.

ಶ್ರೀ ಆರ್. ವೆಂಕಟರುವಯ್ಯ.—ಮೇಲ್ಮನೆ ಬಿಳಿ ಆನೆ ಇದ್ದ ಹಾಗೆ. ಅದನ್ನು ರದ್ದು ಮಾಡಿ. ಆಗ ನಿಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆಗ ಸರ್ಕಾರಕ್ಕೆ ಸುಮಾರು ೩೦ ಲಕ್ಷ ರೂಪಾಯಿಗಳು ಸೇವಿಂಗ್ಸ್ ಆಗುತ್ತವೆ. ಇದರ ಬಗ್ಗೆ ನಾನು ಖಾಸಗಿ ನಿರ್ಣಯವೊಂದನ್ನೂ ಕೂಡ ಕೊಟ್ಟಿದ್ದೇನೆ. ಅನೇಕ ರಾಜ್ಯದಲ್ಲಿ ಮೇಲ್ಮನೆ ಇಲ್ಲ. ಹಾಗಿರುವಾಗ ನಮ್ಮ ರಾಜ್ಯದಲ್ಲಿ ಇದು ಏಕೆ ಬೇಕು? ಇದನ್ನು ರದ್ದು ಮಾಡಿ. ಅದರ ಬಗ್ಗೆ ಯೋಚನೆ ಮಾಡುವುದನ್ನು ಬಿಟ್ಟು ಸದಸ್ಯರ ಸಂಖ್ಯೆಯನ್ನು ಹೆಚ್ಚು ಮಾಡುವ ಬಗ್ಗೆ ಏನು ನಿರ್ಣಯವನ್ನು ತಂದಿದ್ದೀರಿ. ಇದು ಸರಿಯಾದುದಲ್ಲ. ರಾಜ್ಯಾಂಗದಲ್ಲಿ ಇರುವಕ್ಕೆ ಅನುಕೂಲವನ್ನು ಏಕೆ ಉಪಯೋಗ ಮಾಡಿಕೊಳ್ಳಬಾರದು ಎಂದು ಮಂತ್ರಿಗಳು ಹೇಳಬಹುದು. ಆದರೆ ಈ ಸಂದರ್ಭದಲ್ಲಿ ಅಲ್ಲ. ರಾಜ್ಯಾಂಗದಲ್ಲಿ ಮೂರನೆಯ ಒಂದು ಭಾಗ ಅಂತ ಇದೆ. ಆದರಂತೆ ೧೩ ಜನ ಸದಸ್ಯರು ಹೆಚ್ಚಾಗಿ ಬರುತ್ತಾರೆ. ಇದರಿಂದ ತುಂಬಾ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಕರ್ನಾಟಕ ರಾಜ್ಯದ ಜನತೆಗೆ ಮೋಸ ಮಾಡಿದ ಹಾಗೆ ಆಗುತ್ತದೆ, ಈಗಲೇ ೨೧ ಸ್ಥಾನಗಳು ಖಾಲಿ ಇವೆ. ಅವುಗಳನ್ನು ಬೇಗ ಭರ್ತಿ ಮಾಡಿ ಮೇಲ್ಮನೆಯನ್ನು ರದ್ದು ಮಾಡುವ ಬಗ್ಗೆ ಸರ್ಕಾರವೇ ನಿರ್ಣಯವನ್ನು ತೆಗೆದುಕೊಂಡು ಬರಲಿ. ಆಗ ಅದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ. ಆದ್ದರಿಂದ ಮೇಲ್ಮನೆಯನ್ನು ರದ್ದು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೇ ಹೊರತು ಸದಸ್ಯರ ಸಂಖ್ಯೆಯನ್ನು ಜಾಸ್ತಿ ಮಾಡುವುದು ಬೇಡವೆಂದು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತಾ, ಈ ಒಂದು ನಿರ್ಣಯವನ್ನು ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತಾ ನನ್ನ ಮಾತಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಅಧ್ಯಕ್ಷರೆ, ಇವತ್ತು ಈ ಸದನದ ಮುಂದೆ ಒಮ್ಮಿಂದೊಮ್ಮೆಲೇ ತಂದಿರುವಂತಹ ನಿರ್ಣಯವನ್ನು ನೋಡಿದರೆ ನನ್ನ ಮನಸ್ಸಿಗೆ ಖೇದವಾಗುತ್ತದೆ. ಸರ್ಕಾರದವರು ಮಾತೆತ್ತಿದ್ದರೆ ಪ್ರಜಾಪ್ರಭುತ್ವದ ನೀತಿಯನ್ನು ಅನುಸರಿಸುತ್ತೇವೆಂದು ಹೇಳುತ್ತಿದ್ದಾರೆ. ಅಂತಹ ಸರ್ಕಾರ ಕೊನೆಯ ಪಕ್ಷದ ಇಂತಹ ವಿಚಾರಗಳನ್ನು ಸಭಾ ಸಲಹಾ ಸಮಿತಿಯಲ್ಲಿಯಾದರೂ ಪ್ರಾಸ್ತಾವಿಕವಾಗಿ ಚರ್ಚೆ ಮಾಡಬೇಕಾಗಿತ್ತು. ಆ ರೀತಿಯೂ ಮಾಡಿಲ್ಲ. ನನಗೆ ತಿಳಿದ ಮಟ್ಟಿಗೆ ಸರ್ಕಾರ ತರುವಂತಹ ಯಾವುದೇ ನಿರ್ಣಯವಾಗಲೀ ಅಥವಾ ತಿದ್ದುಪಡಿಯಾಗಲಿ, ಮೊದಲು ಅದರ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚೆಯಾಗಿರಬೇಕು. ಈ ಒಂದು ನಿರ್ಣಯದ ವಿಚಾರದಲ್ಲಿ ಆ ರೀತಿ ಸಚಿವ ಸಂಪುಟದಲ್ಲಿ ಚರ್ಚೆ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಪ್ರಾಯಶಃ ಆ ರೀತಿ ಸಚಿವ ಸಂಪುಟದಲ್ಲಿ ಚರ್ಚೆಯಾಗಿರಲಾದೆಂದು ನನ್ನ ಭಾವನೆ. ಆ ರೀತಿ ಚರ್ಚೆಯಾಗಿರದಿದ್ದರೆ, ಸರ್ಕಾರವೇ ಅಧಿಕೃತ ನಿರ್ಣಯದ ರೂಪದಲ್ಲಿ ತಂದು ಈ ಸದನವನ್ನು ದುರುಪಯೋಗ ಮಾಡಿಕೊಳ್ಳುವುದು ಸರಿಯಲ್ಲ. ಈಗಲೂ ನಾನೊಂದು ಸಲಹೆಯನ್ನು ಸರ್ಕಾರಕ್ಕೆ ಮಾಡಬೇಕೆಂದಿದ್ದೇನೆ. ಮೇಲ್ಮನೆಯಲ್ಲಿ ರದ್ದು ಮಾಡುವ ಬಗ್ಗೆ ಸರ್ಕಾರವೇ ನಿರ್ಣಯವನ್ನು ತರಲಿ. ಅದರ ಬಗ್ಗೆ ಧೀರ್ಘವಾಗಿ ಚರ್ಚೆ ಮಾಡಿ ಒಂದು ಅಭಿಪ್ರಾಯಕ್ಕೆ ಬರೋಣ. ಅನೇಕ ಮಾನ್ಯ ಸದಸ್ಯರು ಅದನ್ನು ಅಬಾಲಿಷ್ ಮಾಡುವುದೂ ಸೂಕ್ತ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮೇಲ್ಮನೆಯಲ್ಲಿ ೬೩ ಜನ ಸದಸ್ಯರು ಇದ್ದಾರೆ. ಅವರು ಹಿರಿಯರು ಇದ್ದಾರೆ. ಅವರೂ ಹಿರಿಯರು ಇದ್ದಾರೆ. ಈ ಸದನಕ್ಕೆ ಅವರು ಬುದ್ಧಿವಾದವನ್ನು ಹೇಳುವ ಅಧಿಕಾರ ಅವರಿಗೆ ಇದೆ. ಆ ರೀತಿಯ ಬುದ್ಧಿವಾದವನ್ನು ಇದುವರೆವಿಗೂ ಹೇಳಿದ್ದಾರೆಯೇ ಎಂಬುದಾಗಿ ನಾನು ನಿಮ್ಮನ್ನು ಕೇಳುತ್ತೇನೆ. ೬೩ ಜನ ಇರತಕ್ಕಂತಹ ಸದನದಲ್ಲಿ ಪೂರ್ಣವಾಗಿ ೬೩ ಜನರು ಇರುವುದಕ್ಕೆ ಸಾಧ್ಯವಾಗಿಲ್ಲ. ಏಕೆಂದರೆ ಎಲ್ಲಾ ಸ್ಥಾನಗಳಿಗೂ ಪೂರ್ಣವಾಗಿ ಚುನಾವಣೆಯನ್ನೇ ಮಾಡುವುದಕ್ಕಾಗಿಲ್ಲ. ಇನ್ನೂ ೨೧ ಸ್ಥಾನಗಳನ್ನು ಖಾಲಿ ಇಟ್ಟು ಇಪ್ಪತ್ತು ಮತ್ತೊಮ್ಮೆ ೨೨ ಜನ ಸದಸ್ಯರ ಸ್ಥಾನಗಳನ್ನು ಹೆಚ್ಚು ಮಾಡುವುದು ಸರಿಯೇ? ಎಂದು ನಾನು ನಿಮ್ಮನ್ನು ಕೇಳುತ್ತಿದ್ದೇನೆ. ಖಾಲಿ ಇರುವಂತಹ ೨೧ ಸ್ಥಾನಗಳಿಗೆ ಚುನಾವಣೆಯನ್ನು ನಡೆಸುವುದರಲ್ಲಿ ನೀವು ಅಸಮರ್ಥರಾಗಿದ್ದೀರಿ. ಪುನಃ ೧೨ ಜನ ಸದಸ್ಯರ ಸಂಖ್ಯೆಯನ್ನು ಹೆಚ್ಚು ಮಾಡುವುದರಲ್ಲಿ

ಏನಾದರೂ ಅರ್ಥವಿಲ್ಲದೆಯೇ ? ಮೇಲ್ಮನೆಯನ್ನು ರದ್ದು ಮಾಡುವ ಬಗ್ಗೆ ಅನೇಕ ಜನ ಜನತಾ ಪಕ್ಷದ ಸದಸ್ಯರೂ ಹೇಳಿದ್ದಾರೆ. ಅದೇ ರೀತಿ ಕಾಂಗ್ರೆಸ್ ಪಕ್ಷದ ಸದಸ್ಯರೂ ಹೇಳಿದ್ದಾರೆ. ಅದೇ ರೀತಿ ಕಾಂಗ್ರೆಸ್ ಪಕ್ಷದ ಸದಸ್ಯರೂ ಹೇಳಿದ್ದಾರೆ, ಈ ಒಂದು ಅಭಿಪ್ರಾಯವನ್ನು ನಾನು ವ್ಯಯಕ್ತಿಕವಾಗಿ ಹೇಳುತ್ತಿದ್ದೇನೆ. ನನ್ನ ಪಕ್ಷದ ವತಿಯಿಂದ ಎಂದೂ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಆ ಬಗ್ಗೆ ಇನ್ನೂ ಪಕ್ಷದ ಮಟ್ಟದಲ್ಲಿ ಯಾವುದೇ ತೀರ್ಮಾನವಾಗಿಲ್ಲ. ಆದ್ದರಿಂದ ಮೇಲ್ಮನೆಯ ಸದಸ್ಯರ ಸಂಖ್ಯೆಯನ್ನು ಇನ್ನೂ ಹೆಚ್ಚು ಮಾಡುವಂಥದ್ದು ಸರಿಯಾದ ಅಲ್ಲ. ಮಾನ್ಯ ಸಚಿವರು ಅವರ ಪ್ರಾರಂಭದ ಭಾಷಣದಲ್ಲಿ ರಾಜ್ಯಾಂಗದ ಪ್ರಕಾರ ಸದಸ್ಯರ ಸಂಖ್ಯೆಯನ್ನು ಹೆಚ್ಚು ಮಾಡಿದರೆ ಎಲ್ಲರಿಗೂ ಪ್ರಾತಿನಿಧ್ಯವನ್ನು ಕೊಡುವುದಕ್ಕೆ ಸಹಾಯವಾಗುತ್ತದೆ ಎನ್ನುವ ಅಭಿಪ್ರಾಯವನ್ನು ಹೇಳಿದ್ದಾರೆ. ಇದರಿಂದ ಯಾವ ಅನುಕೂಲವೂ ಆಗುವುದಿಲ್ಲ. ಈಗ ಇರತಕ್ಕಂತಹ ಉಪಾಧ್ಯಾಯರ ಕ್ಷೇತ್ರಗಳಲ್ಲಿ ಹಾಗೂ ಪದವೀಧರ ಕ್ಷೇತ್ರಗಳಲ್ಲಿ ಅನೇಕ ಲೋಪದೋಷಗಳು ಇವೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಚಿಂತೆ ಮಾಡಿ ಸರಿಪಡಿಸುವ ಬಗ್ಗೆ ತಿದ್ದುಪಡಿಯನ್ನು ತಂದಿದ್ದರೆ ಒಪ್ಪಬಹುದಿತ್ತು. ಆದ್ದರಿಂದ ಇದರ ಬಗ್ಗೆ ಪುನಃ ಆಲೋಚನೆ ಮಾಡಬೇಕು. ಈ ಸದನದ ಮುಂದೆ ಇನ್ನೂ ಅನೇಕ ಮಹತ್ವರವಾದ ವಿಚಾರಗಳು ಇವೆ. ಕಂದಾಯ ಸಚಿವರು ಬರಗಾಲದ ಬಗ್ಗೆ ತಮ್ಮ ಹೇಳಿಕೆಯನ್ನು ಮಾಡುತ್ತೇನೆಂದು ಹೇಳಿದ್ದಾರೆ. ಹೇಳಿಕೆಯನ್ನು ಕೊಟ್ಟ ತಕ್ಷಣ ಬರಗಾಲ ಹೋಗುವುದಿಲ್ಲ. ಆದರೆ ಬರಗಾಲದಲ್ಲಿ ಕಂಗಾಲಾಗಿರತಕ್ಕ ಜನತೆಗೆ ಏನೇನು ಸರ್ಕಾರದವರು ಮಾಡಬೇಕೆಂಬುದರ ಬಗ್ಗೆ ಒಂದು ವರದಿಯನ್ನು ಸಲ್ಲಿಸುವುದಕ್ಕೆ ಆಗುವುದಿಲ್ಲವೇ ? ಅದೇ ಸಮಯವನ್ನು ಇವರು ದುರುಪಯೋಗ ಮಾಡಿಕೊಂಡು ಇಂತಹ ಕರಾಳವಾದ ನಿರ್ಣಯವನ್ನು ತಂದಿದ್ದಾರೆ ಏತಕ್ಕೆ ಇದನ್ನು ತಂದಿದ್ದಾರೆಂಬುದು ನನಗೆ ಗೊತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿದ್ದಿದ್ದರೆ ಅವರೊಡನೆ ಚರ್ಚೆ ಮಾಡಬಹುದಿತ್ತು. ಇದು ಸಮಂಜಸವಾದುದಲ್ಲವೆಂದು ಅವರಿಗೆ ಹೇಳಬಹುದಾಗಿತ್ತು. ಆದರೆ ಅವರೂ ಇಲ್ಲ. ಆದ್ದರಿಂದ ಈ ಒಂದು ನಿರ್ಣಯವನ್ನು ಅವರು ದಯಮಾಡಿ ವಾಪಸ್ಸು ತೆಗೆದುಕೊಳ್ಳಬೇಕು. ೬೩ ಜನ ಸದಸ್ಯರು ಇರತಕ್ಕಂತಹ ಮೇಲ್ಮನೆಯನ್ನು ೭೫ಕ್ಕೆ ಏರಿಸುವುದು ಪ್ರಜಾಪ್ರಭುತ್ವಕ್ಕೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ೧೨ ಜನ ಸದಸ್ಯರ ಸಂಖ್ಯೆಯನ್ನು ಹೆಚ್ಚು ಮಾಡಿದರೂ ಯಾರ್ಯಾರಿಗೆ ಎಷ್ಟೆಷ್ಟು ಹೋಗುತ್ತದೆಯೇ ಗೊತ್ತಿಲ್ಲ. ಏಕೆಂದರೆ ಅದರಲ್ಲಿ ನಾಮನಿರ್ದೇಶನ ಸದಸ್ಯರೂ ಬರುತ್ತಾರೆ. ಬೇರೆ ಬೇರೆ ಕ್ಷೇತ್ರಗಳಲ್ಲಿ ಕೆಲಸ ಮಾಡಿರತಕ್ಕ ಸದಸ್ಯರೂ ಇದ್ದಾರೆ. ಆದರೆಲ್ಲಿ ವಿಧಾನ ಸಭೆಯಿಂದ ಚುನಾಯಿತರಾಗತಕ್ಕಂತಹವರ ಸಂಖ್ಯೆ ೩–೪ ಮಾತ್ರ ಬರಬಹುದು, ಪದವೀಧರರ ಕ್ಷೇತ್ರಗಳ ಬಗ್ಗೆ ಹೇಳುವುದಾದರೆ ಒಂದೂ ಜಿಲ್ಲೆಗೆ ಎರಡು ಕ್ಷೇತ್ರಗಳಿಂ. ಇನ್ನೊಂದು ಜಿಲ್ಲೆ ಒಂದೇ. ಈ ರೀತಿಯ ಅನೇಕ ಲೋಪದೋಷಗಳು ಇವೆ. ಲೋಕಲ್ ಅಥಾರಿಟಿ ಕ್ಷೇತ್ರಗಳಲ್ಲೂ ಒಂದೊಂದು ಜಿಲ್ಲೆಗೆ ಒಂದೊಂದು ರೀತಿಯಲ್ಲಿದೆ. ಪ್ರತಿಯೊಂದು ಜಿಲ್ಲೆಗೂ ತಾರತಮ್ಯ ಇಲ್ಲದ ರೀತಿಯಲ್ಲಿ ಇರತಕ್ಕ ನ್ಯೂನತೆಗಳನ್ನು ಸರಿಪಡಿಸುವ ಬಗ್ಗೆ ಸರ್ಕಾರ ಗಮನಹರಿಸಬೇಕು. ಅದನ್ನು ಬಿಟ್ಟು ಸದಸ್ಯರ ಸಂಖ್ಯೆಯನ್ನು ಹೆಚ್ಚು ಮಾಡುವುದರಿಂದ ಎಲ್ಲರಿಗೂ ಪ್ರಾತಿನಿಧ್ಯ ಸಿಕ್ಕುತ್ತದೆ ಎಂಬ ಒಂದೇ ಅಭಿಪ್ರಾಯದಲ್ಲಿ ಮಾನ್ಯ ಶ್ರೀ ಲಕ್ಷ್ಮೀಸಾಗರ್‌ರವರು ಹೋಗಬಾರದು. ಅದನ್ನು ಬಿಟ್ಟು ಬಿಡಬೇಕು. ಸರ್ಕಾರದ ಈ ಒಂದು ನಿರ್ಣಯವನ್ನು ನಾನು ಪ್ರಬಲವಾಗಿ ವಿರೋಧಿಸಿ ನನ್ನ ಮಾತುಗಳನ್ನು ಮುಂಗಿಸುತ್ತೇನೆ.

೩–೩೦ ಪಿ. ಎಂ.

† ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೆ, ಈ ಮೇಲ್ಮನೆಯನ್ನು ರದ್ದು ಮಾಡಬೇಕೆಂದು ನಾನು ಮತ್ತು ಕೆ. ಹೆಚ್. ಪಾಟೀಲರು ಸೇರಿ ಒಂದು ತಿದ್ದುಪಡಿಯನ್ನು ಕಳುಹಿಸಿ ಕೊಟ್ಟಿದ್ದೇವೆ. ನನಗೆ ಜ್ಞಾಪಕ ಇದ್ದ ಹಾಗೆ ನಾನು ಮೇಲ್ಮನೆಯನಾಯಕನಾಗಿದ್ದೆ. ಆಗ ಹಲವಾರು ಸಮಸ್ಯೆಗಳು ಬಂದವು. ಅವುಗಳಲ್ಲಿ ಒಂದು ಎಂದರೆ, ಈ ಮೇಲ್ಮನೆ ಇದ್ದರೆ ರಾಜ್ಯಕ್ಕಾದರೂ ಪ್ರಯೋಜನವಾಗಿರಬೇಕು, ಇಲ್ಲದಿದ್ದರೆ ಕೆಳಮನೆಯ ನಡವಳಿಕೆಗಾದರೂ ಮಾರ್ಗದರ್ಶನವಾಗಿರಬೇಕು, ಈ ಎರಡೂ ಇಲ್ಲದಿದ್ದಾಗ ಸುಮ್ಮನೆ ತಕರಾರು, ಗಲಾಟೆ ಮಾಡತಕ್ಕ ಪ್ರಸಂಗಕ್ಕೆ ಇನ್ನೊಂದು ಸಭೆಯನ್ನು ಮಾಡುವುದು ಸರಿಯಲ್ಲವೆಂದು ನಿರ್ಧಾರ ಮಾಡಿದೆವು. ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ಕೂಡ ತರ್ಕ ಮಾಡಿದ್ದೇವೆ. ಆಗ ದೇವರಾಜ ಅರಸುರವರು ಮುಖ್ಯ ಮಂತ್ರಿಗಳಾಗಿದ್ದರು. ಈ ಸಭೆಯನ್ನು ರದ್ದುಪಡಿಸಲಿಕ್ಕೆ ಯೋಚನೆ ಮಾಡುತ್ತಿದ್ದೇವೆಂದು ಆಗ ನಾನೇ ಅನೌನ್ಸ್ ಮಾಡಿದ್ದೇನೆ. ಈ ಬಗ್ಗೆ ಅತಿ ಶೀಘ್ರವಾಗಿ ನಿರ್ಣಯತೆಗೆದುಕೊಂಡು ಬರುತ್ತೇವೆಂದೂ ಅನೌನ್ಸ್ ಮಾಡಿದ್ದೆ. ತಾವು

ಅದನ್ನು ಪರಿಶೀಲಿಸಬಹುದು. ಮಾನ್ಯ ಲಕ್ಷ್ಮೀಸಾಗರ್‌ರವರು ಆ ಕಡೆಗೆ ಕಿವಿ ಕೊಟ್ಟಿರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಮಾಡಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಅದಕ್ಕೆ ಕಾರಣ ಚುನಾವಣೆಗಳು ಬಂದವು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ದೇವರಾಜ ಅರಸುರವರು ನಿಮ್ಮ ಅಭಿಪ್ರಾಯಕ್ಕೆ ಮನ್ನಣೆ ಕೊಡಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಅವರೇ ಮುಂದಾಳುಗಳಾಗಿ ಈ ಅಭಿಪ್ರಾಯವನ್ನು ಹೇಳಿ ಎಂದು ಹೇಳಿದ್ದರು. ಕ್ಯಾಬಿನೆಟ್‌ನಲ್ಲಿ ತರ್ಕ ಮಾಡಿದ ಬಳಿಕ ಮೇಲ್ಮನೆಗೆ ತಿಳಿಸಿಬನ್ನಿ ಎಂದು ಹೇಳಿದ್ದರು ನನಗೆ ಜ್ಞಾಪಕ ಇದೆ. ಈ ಹಿನ್ನೆಲೆಯಲ್ಲಿ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಅದನ್ನು ಇಟ್ಟುಕೊಳ್ಳುವುದರಿಂದ ನೂರಾರು ಜನರಿಗೆ ಅಲ್ಲಿ ಅವಕಾಶ ಮಾಡಿಕೊಟ್ಟು ಅವರು ಸುಖವಾಗಿ ಜೀವನ ಮಾಡುವುದಕ್ಕೆ ದಾರಿ ಆಗುತ್ತದೆಯೇ ಹೊರತು ನಮಗಂತೂ ಅದರಿಂದ ಏನೂ ಉಪಯೋಗವಾಗುವುದಿಲ್ಲ. ಆದ್ದರಿಂದ ಅದು ರದ್ದಾಗತಕ್ಕ ಅವಶ್ಯಕತೆ ಇದೆ. ಕೆ.ಹೆಚ್. ಪಾಟೀಲರು, ವೆಂಕಟರಾಮಯ್ಯನವರು, ಬಂಗಾರಪ್ಪ ನವರು ಏನು ಹೇಳಿದ್ದಾರೆ ಅವರ ಮಾತಿಗೆ ನಾನೂ ಕೂಡ ಧ್ವನಿಗೂಡಿಸುತ್ತೇನೆ. ನಾವಿಬ್ಬರು ತಿದ್ದುಪಡಿಗೆ ರುಜು ಮಾಡಿ ಕೊಟ್ಟಿದ್ದೇವೆ. ಈ ಹಿನ್ನೆಲೆಯಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು.

(ಶ್ರೀಮತಿ ಲೀಲಾದೇವಿ ಪ್ರಸಾದ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಆಂಧ್ರದಲ್ಲಿ ಎನ್.ಟಿ.ಆರ್. ಅವರು ಒಂದು ನಿರ್ಣಯ ತಂದು ಮೇಲ್ಮನೆ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೆ ಪ್ರಯೋಜನವಾಗುವುದಿಲ್ಲ, ಕೆಲಸ ಕಾರ್ಯಗಳು ಸಂಸೂತ್ರವಾಗಿ ಆಗುವುದಿಲ್ಲ. ಅದು ಇರುವುದರಿಂದ ಅಡ್ಡಿ ಆತಂಕಗಳು ಜಾಸ್ತಿ ಇವೆ. ಕೆಳಮನೆಯಲ್ಲಿ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ, ತೀರ್ಮಾನಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇರುವುದಿಲ್ಲ, ಸರ್ಕಾರವನ್ನು ಸುಲಲಿತವಾಗಿ ನಡೆಸುವುದಕ್ಕೆ ಅವಕಾಶವಾಗುವುದಿಲ್ಲವೆಂದು ರದ್ದುಪಡಿಸಿದ್ದಾರೆ. ಅದನ್ನು ಪಾರ್ಲಿಮೆಂಟಿನವರು ಒಪ್ಪಿದ್ದಾರೆ. ಎಲ್ಲಾ ಕಡೆಯೂ ಮೇಲ್ಮನೆಯನ್ನು ರದ್ದು ಮಾಡಬೇಕೆಂದು ಚಳುವಳಿ ನಡೆಯುತ್ತಿರುವಾಗ ಲಕ್ಷ್ಮೀಸಾಗರ್‌ರವರು ಮಂತ್ರಿ ಮಂತ್ರಿಗಳು ಇಲ್ಲದಾಗ ಈ ನಿರ್ಣಯವನ್ನು ಅವಸರ ಅವಸರವಾಗಿ ಆದೂ ಕೊನೆಯ ದಿನ ತರತಕ್ಕದ್ದು ಸೂಕ್ತವಲ್ಲವೆಂದು ಸ್ಪಷ್ಟವಾದ ಅಭಿಪ್ರಾಯ. ಇದರ ಬಗ್ಗೆ ನೀವು ಕ್ಯಾಬಿನೆಟ್ ತೀರ್ಮಾನ ತೆಗೆದುಕೊಂಡಿದ್ದೀರೋ ಇಲ್ಲವೋ ಗೊತ್ತಿಲ್ಲ. ಕ್ಯಾಬಿನೆಟ್ ತೀರ್ಮಾನ ತೆಗೆದು ಕೊಂಡಿದ್ದರೆ ನಮಗೆ ಸಾಕಷ್ಟು ಅವಕಾಶ ಕೊಡಬೇಕು, ನೀವು ನಮಗೆ ಅವಕಾಶ ಕೊಡದೆ ಅವಸರವಸರವಾಗಿ ಇದನ್ನು ತಂದಿದ್ದೀರಿ. ಇದಕ್ಕೆ ನನ್ನ ವಿರೋಧ ಇದೆ. ಅದನ್ನು ರದ್ದು ಮಾಡಬೇಕೆಂದು ಪ್ರಯತ್ನಿಸುತ್ತಿರುವಾಗ ಸದಸ್ಯರ ಸಂಖ್ಯೆಯನ್ನು ಹೆಚ್ಚು ಮಾಡಬೇಕೆಂಬುದು ಸರಿಯಲ್ಲ. ರಾಜ್ಯಾಂಗದ ಪ್ರಕಾರ ಅದು ಸರಿಯಾಗುವುದಿಲ್ಲ. ಮಾನ್ಯ ವೆಂಕಟರಾಮಯ್ಯನವರು ಹೇಳಿದರು, ಆರ್ಟಿಕಲ್ ೩೩೦ರ ಪ್ರಕಾರ ೧೯೭೧ರಲ್ಲಿ ಏನು ಜನಸಂಖ್ಯೆ ಇತ್ತು ಆದಕ್ಕನುಗುಣವಾಗಿ ಸದಸ್ಯರ ಸ್ಥಾನಗಳನ್ನು ಏನು ನಿರ್ಣಯ ಮಾಡಿದ್ದಾರೆ ಅದು ೨೦೦೦ ವರ್ಷದವರೆಗೆ ಜನಸಂಖ್ಯೆ ಏನೇ ಹೆಚ್ಚು ಆದರೂ ಸದಸ್ಯರ ಸ್ಥಾನಗಳು ಏನಿವೆ ಅವುಗಳಷ್ಟೆ ಜಾಸ್ತಿ ಮಾಡಬಾರದೆಂದು ಹೇಳಿದ್ದಾರೆ. ಅದರ ಪ್ರಕಾರ ಜಿಲ್ಲಾ ಪರಿಷತ್ತಿಗೆ ತಿದ್ದುಪಡಿ ತಂದು ೨೦೦೦ ವರ್ಷದವರೆಗೆ ಸದಸ್ಯರ ಸಂಖ್ಯೆಯನ್ನು ಹೆಚ್ಚು ಮಾಡಬಾರದೆಂದು ಹೇಳಿದ್ದೇವೆ. ಆದ್ದರಿಂದ ಎಲ್ಲಿ ಜನಸಂಖ್ಯೆ ಹೆಚ್ಚಿದೆ ಅಲ್ಲಿ ಸದಸ್ಯರ ಸ್ಥಾನವನ್ನು ಹೆಚ್ಚು ಮಾಡ ಬೇಕೆಂದು ಹೇಳುವ ವಾದ ಸರಿಯಲ್ಲವೆಂದು ಹೇಳುತ್ತೇನೆ. ನೀವು ಏನು ನಿರ್ಣಯ ತಂದಿದ್ದೀರಿ ಅದನ್ನು ಸಂಪೂರ್ಣವಾಗಿ ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ.ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷಣಿಯವರೆ, ಈ ನಿರ್ಣಯದ ಸಂಬಂಧದಲ್ಲಿ, ನಮ್ಮ ಪ್ರಾತಿನಿಧ್ಯದ ವಿಚಾರದಲ್ಲಿ ಹಾಗೂ ಮೇಲ್ಮನೆಯ ಅಗತ್ಯತೆಯ ವಿಚಾರದಲ್ಲಿ ಹೊಸ ಚಿಂತನೆ ಇಲ್ಲಿ ಸ್ಫುರಿಸಿದೆ. ಪ್ರಾಯಶಃ ಈಗ ಮೇಲ್ಮನೆ ಇರಬೇಕೇ ಇರಬಾರದೆ ಎಂಬ ವಿಷಯ ಅಧಿಕೃತವಾಗಿ ನಮ್ಮ ಮುಂದೆ ಇಲ್ಲ. ಅಧಿಕೃತವಾಗಿ ಆ ಚರ್ಚೆ ನಮ್ಮ ಮುಂದೆ ಇದೆ ಎಂದು ನಾನು ಅಂದು ಕೊಂಡಿಲ್ಲ. ಅದರ ಬಗ್ಗೆ ಹಿರಿಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ.

ಬಹುಶಃ ಸಾಂದರ್ಭಿಕವಾಗಿ ಆ ವಿಚಾರಗಳು ಬಂದಿವೆ ಎಂದು ನನ್ನ ಭಾವನೆ. ನಮ್ಮ ಪಕ್ಷದ ನಾಯಕರೂ ಕೂಡ ಸಾಂದರ್ಭಿಕವಾಗಿ ಪಲವಾರು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಮೇಲ್ಮನೆ ಮತ್ತು ಕೆಳಮನೆ ವಿಚಾರದಲ್ಲಿ ಬೇರೆ ಕೆಲವು ರಾಜ್ಯಗಳಿಗಿಂತ ಹೆಚ್ಚಿನ ಇತಿಹಾಸ ಇದೆ. ಮಹಾರಾಜರ ಕಾಲದಲ್ಲಿ ನೋಡಿದರೆ ಸಂಸ್ಥಾನಗಳು ನಿರ್ಮಾಣವಾದಾಗಲೇ ಮೇಲ್ಮನೆ ಮತ್ತು ಕೆಳಮನೆ ನಿರ್ಮಾಣವಾಗಿದ್ದವು. ಇನ್ನು ಪ್ರಾತಿನಿಧ್ಯದ ವಿಚಾರಕ್ಕೆ ಹೋಗುವುದಾದರೆ ಅಥವಾ ರಾಜ್ಯ ಶಾಸ್ತ್ರ ಸಿದ್ಧಾಂತಗಳ ಬಗ್ಗೆ ಗಮನ ಹರಿಸುವುದಾದರೆ ಯಾವುದೂ ನಿಜವಾದ ಪ್ರಾತಿನಿಧ್ಯ ಹೌದಾ ಅಲ್ಲ ಎಂಬುದರ ಬಗ್ಗೆ ಸಾಕಷ್ಟು ವಾದ ವಿವಾದಗಳು ಇವೆ, ಸಾಕಷ್ಟು ಸಿದ್ಧಾಂತಗಳು ಇವೆ. ನೇರವಾಗಿ ಜನರಿಂದ ಚುನಾಯಿತರಾದವರು ಮಾತ್ರ ಪ್ರತಿನಿಧಿಗಳು ಎಂಬ ಭಾವನೆ ಶಾಸ್ತ್ರ ಸಮ್ಮತವಲ್ಲ. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಇನ್ನೊಬ್ಬರಿಗೆ ಸರಿಸಮಾನನಾಗಿರುವುದರಿಂದ ಶಾಸ್ತ್ರವನ್ನು ನೋಡಿದರೆ ಒಬ್ಬ ವ್ಯಕ್ತಿಯನ್ನು ಇನ್ನೊಬ್ಬ ವ್ಯಕ್ತಿ ಪ್ರತಿನಿಧಿಸತಕ್ಕದ್ದು ಸೂಕ್ತವಲ್ಲ. ರಾಜ್ಯ ಶಾಸ್ತ್ರಜ್ಞರು ಇದರ ಬಗ್ಗೆ ಬಹಳ ವಿವರವಾದ ಸಿದ್ಧಾಂತವನ್ನು, ತರ್ಕವನ್ನು ಮಂಡಿಸಿದ್ದಾರೆ. ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯನ್ನು ಪ್ರತಿನಿಧಿಸತಕ್ಕದ್ದು ಸರಿಯಾದುದಲ್ಲ. ಹಾಗಾದರೆ ನಾನೂ ಪ್ರತಿನಿಧಿಸಬಹುದು. ಹಲವಾರು ವಕ್ತಿಗಳಿಗೆ ಸಂಬಂಧಪಟ್ಟ ಹುದ್ದೆಯನ್ನು ಯಾರಾದರೂ ಒಬ್ಬರು ಪ್ರತಿನಿಧಿಸುವುದಕ್ಕೆ ಸಾಧ್ಯವಿದೆ. ಆದ್ದರಿಂದ ಹುದ್ದೆಗಳನ್ನು ಪ್ರತಿನಿಧಿಸತಕ್ಕ ಪ್ರಾತಿನಿಧ್ಯವೇ ವ್ಯಕ್ತಿಗಳನ್ನು ಪ್ರತಿನಿಧಿಸತಕ್ಕದ್ದು ಮುಖ್ಯವಾದುದು ಎಂಬ ಸಿದ್ಧಾಂತ ಕೂಡ ರಾಜ್ಯ ಶಾಸ್ತ್ರವನ್ನು ಅಭ್ಯಾಸ ಮಾಡಿದರೆ ಅದರಲ್ಲಿ ಈ ಅಭಿಪ್ರಾಯ ಸಾಕಷ್ಟು ದೊರಕುತ್ತದೆ. ಆ ತತ್ವವನ್ನು ಒಪ್ಪಿಯೂ ಕೂಡ ಹಲವಾರು ದೇಶಗಳಲ್ಲಿ ಬೇರೆ ಬೇರೆ ರೀತಿಯ ಪ್ರಾತಿನಿಧ್ಯದ ವ್ಯವಸ್ಥೆ ಇದೆ. ಬರೀ ಜನಗಳಿಂದ ಚುನಾಯಿತವಾಗುವುದು ಒಂದೇ ಪ್ರಶ್ನೆ ಅಲ್ಲ. ಬೇರೆ ಬೇರೆ ಹುದ್ದೆಗಳನ್ನು ಪ್ರತಿನಿಧಿಸತಕ್ಕ ವ್ಯವಸ್ಥೆ ಬೇರೆ ಬೇರೆ ಇರಬಹುದು. ಅನೇಕ ಸಾಂಸ್ಥಿಕ ವ್ಯವಸ್ಥೆಗಳು ಇವೆ. ಅಂಥ ಒಂದು ಸಂದರ್ಭದಲ್ಲಿ ಯಾವುದೋ ಒಂದು ತರ್ಕವನ್ನು ಹತ್ತಿದಾಗ ಅದು ಸರಿಯೇ ತಪ್ಪೇ ಎಂದು ತೀರ್ಮಾನಿಸುವುದು ಅಪ್ರಸ್ತುತವಲ್ಲ. ಚರ್ಚೆ ಅಪ್ರಸ್ತುತ ಎಂದರೆ ಅದಕ್ಕೆ ನನ್ನ ಪ್ರಶ್ನೆ ಏನೆಂದರೆ ನಮ್ಮ ದೇಶದಲ್ಲಿ ಮೇಲ್ಮನೆಯನ್ನು ರದ್ದು ಮಾಡತಕ್ಕ ಅಭಿಪ್ರಾಯ ಕಾಲಕಾಲಕ್ಕೆ ಬಂದಿದೆಯೋ ಏನೋ? ತತ್ಕಾಲದಲ್ಲಿ ಅಧಿಕಾರದಲ್ಲಿರತಕ್ಕ ಸರ್ಕಾರಗಳು ತಮ್ಮ ಮೂಗಿನ ನೇರಕ್ಕೆ ವಿಚಾರ ಮಾಡುವುದು, ಇವೆಲ್ಲಾ ಕಾರಣಗಳು ಇವೆ. ಹೇಗೆ ಕೆಳಮನೆಗೆ ಒಂದು ಪಾತ್ರ ಇದೆಯೋ ಹಾಗೆ ಮೇಲ್ಮನೆಗೂ ಅದರದ್ದೇ ಒಂದು ಪಾತ್ರ ಇದೆ ಮತ್ತು ಪ್ರಾತಿನಿಧ್ಯದ ಸ್ವರೂಪವೂ ಕೂಡ ಇದೆ. ಅದನ್ನು ಕಾಪಾಡಿಕೊಂಡು ಬಂದಿದ್ದರೆ ಈ ಒಂದು ಅಭಿಪ್ರಾಯಕ್ಕೆ ಅವಕಾಶವಾಗುತ್ತಿರಲಿಲ್ಲ ನಾವು ರಾಜಕೀಯ ಪಕ್ಷದ ಮುಖಂಡರು ಅಧಿಕಾರಕ್ಕೆ ಬಂದ ಕೂಡಲೇ ಅಧಿಕಾರ ಹಂಚಿಕೆ ಮಾಡುವ ದೃಷ್ಟಿಯಿಂದ ನಮ್ಮ ಕೈಯಲ್ಲಿ ಸಿಕ್ಕಿದ ಬಳಿಕ ಎಲ್ಲಾ ಪ್ರಾತಿನಿಧಿಕ ವ್ಯವಸ್ಥೆಗಳನ್ನು ಬದಲಾವಣೆ ಮಾಡಿ ದುರುಪಯೋಗ ಮಾಡುವುದರಿಂದ ಅಯಾಯ ಸ್ಥಾನಗಳಲ್ಲಿ ಯಾರು ಯಾರು ಇರಬೇಕು, ಯಾವ ಯಾವ ಪಾತ್ರವನ್ನು ವಹಿಸಬೇಕು ಅದಕ್ಕೆಲ್ಲಕ್ಕೆ ಉಂಟಾಗಿದೆ.

ಇವತ್ತು ಮೇಲ್ಮನೆ ಯಾವ ಪಾತ್ರವನ್ನು ವಹಿಸಬೇಕು, ಅಲ್ಲಿ ಯಾವ ರೀತಿ ಪ್ರಾತಿನಿಧ್ಯ ಇರಬೇಕು ಅದು ತಮಗೆ ಗೊತ್ತಿದೆ ಈಗ ಕೆಲವು ಸ್ಥಾನಗಳಿಗೆ ನಾಮಿನೇಟ್ ಮಾಡತಕ್ಕಂಥದ್ದು ಇದೆ. ಅದು ಇಂತಿಂಥ ಹಿತಗಳನ್ನು ಪ್ರತಿನಿಧಿಸಿ ಇಷ್ಟು ಯೋಗ್ಯತೆ ಇದ್ದವರನ್ನು ನಾಮಿನೇಟ್ ಮಾಡಬೇಕು ಎಂದು ಇದ್ದರೂ ಕೂಡಾ ಕೊನೆಗೂ ಏನಾಗುತ್ತದೆ ? ಯಾವುದೇ ಒಂದು ಸರ್ಕಾರ ಇದ್ದಾಗ ಆಯಾಯ ಕ್ಷೇತ್ರದವರನ್ನೇ ಆರಿಸಿದಾಗಲೂ ಕೂಡಾ ಕ್ಷೇತ್ರದಲ್ಲಿ ಯಾರು ನಿಜವಾಗಲೂ ಕೂಡಾ ಅತ್ಯಂತ ಹೆಚ್ಚಿನ ಸೇವೆಯನ್ನು ಸಲ್ಲಿಸಿದ್ದಾರೋ ಅವರಿಗೆ ನಿಜವಾಗಿಯೂ ಆ ಪ್ರಾತಿನಿಧ್ಯ ದೊರಕುವುದಿಲ್ಲ. ಆ ಕ್ಷೇತ್ರದಲ್ಲಿ ಆಗಿರತಕ್ಕಂಥ ಸರ್ಕಾರವನ್ನೋ ಮಂತ್ರಿಮಂತ್ರಿಗಳನ್ನೋ ಯಾರು ಜಾಲ ಬಡಿಯುತ್ತಾರೆ ಅವರಿಗೆ ಆ ಪ್ರಾತಿನಿಧ್ಯ ಸಿಗುತ್ತದೆ. ಆದರಿಂದಾಗಿ ಇವೊತ್ತು ಏನಾಗಿದೆ. ಮೇಲ್ಮನೆಗೆ ಯಾವ ಅರ್ಥ ಇಟ್ಟು ಯಾವ ಪ್ರಾತಿನಿಧಿಕವಾದಂಥ ಒಂದು ವಿಚಾರದ ಪರಂಪರೆಯಲ್ಲಿ ಈ ಮೇಲ್ಮನೆಗಳು ಸೃಷ್ಟಿಯಾಗಿದವೋ ಯಾವ ಒಂದು ರಾಜ್ಯ ಶಾಸ್ತ್ರೀಯ ಸೈದ್ಧಾಂತಿಕದ ಹಿನ್ನೆಲೆಯಲ್ಲಿ ಈ ಮೇಲ್ಮನೆಯ ಪ್ರಾತಿನಿಧಿಕ ವ್ಯವಸ್ಥೆಯನ್ನು ರೂಪಗೊಂಡಿದೆಯೋ ? ಆ ವ್ಯವಸ್ಥೆಗೆ ಅಪಚಾರವಾಗಿದೆ. ಅದರಲ್ಲಿ ನಾನು, ನಾವು ನೀವು ಎಂದು ಹೇಳಿಕೊಳ್ಳುವುದಿಲ್ಲ ನಾವೆಲ್ಲರೂ ಕೂಡಾ ಭಾಗಿಗಳಾಗಿರಬಹುದು. ಆದರ ಬಗ್ಗೆ ಇದರ ಹಿಸ್ಸೆ ಮಾಡುವುದಕ್ಕೆ ತಯಾರಾಗಿಲ್ಲ. ಇವೊತ್ತು ಆಯಾಯ ಸಂಸ್ಥೆಗಳಲ್ಲಿ ಯಾವ ರೀತಿಯ ಪ್ರಾತಿನಿಧಿಕ

ವ್ಯವಸ್ಥೆ ಇರಬೇಕೋ ? ಏತಕ್ಕಾಗಿ ಈ ಸಂಸ್ಥೆಗಳು ನಿರ್ಮಾಣ ಆಗಿದೆಯೋ ? ಎಂತಹ ವ್ಯಕ್ತಿಗಳು ಅಲ್ಲಿರಬೇಕು ? ಅದನ್ನೇ ಜಾಗರೂಕತೆಯಿಂದ ಪಾಲಿಸಿದರೆ ಬಹುಃಶಃ ಈ ಮನೆಗಳೂ ಕೂಡಾ ವ್ಯವಸ್ಥಿತವಾಗಿ, ಜನಗಳಿಗೆ ಉಪಯುಕ್ತವಾಗಿ, ಸರ್ಕಾರಕ್ಕೆ ಉಪಯುಕ್ತವಾಗಿ, ಜನಸೇವೆ ಅನುಕೂಲವಾಗಿ ಪರಿಣಮಿಸುವುದಕ್ಕೆ ಸಾಧ್ಯ ಇದೆ. ಈಗ ಆ ರೀತಿ ಆಗದೇ ಹೋಗುವುದರಿಂದ ಏನಾಗಿದೆ ಎಂದರೆ ಪ್ರತಿಯೊಂದು ಸಂಸ್ಥೆಯೂ ಕೂಡಾ ಆಯಾಯ ಕಾಲದಲ್ಲಿ ಯಾರದು ಬಲ ಮೇಲಾಗುತ್ತದೆಯೋ ಅವರು ತಮ್ಮ ಬಲವನ್ನು ಇನ್ನಷ್ಟು ಹೆಚ್ಚು ಮಾಡಿಕೊಳ್ಳುವುದಕ್ಕೆ ಅಥವಾ ತಮ್ಮ ಪರಾಕ್ರಮವನ್ನು ಮೆರೆಸುವುದಕ್ಕೆ ಅಥವಾ ತಮ್ಮ ಪಕ್ಷದಲ್ಲಿ ಇನ್ನೆಲ್ಲೂ ಜಾಗ ಕೊಡುವುದಕ್ಕೆ ಆಗದಿದ್ದಾಗ ಜಾಗ ಕೊಡುವುದಕ್ಕೋಸ್ಕರ, ಜಗಳಗಳನ್ನು ಬಗೆಹರಿಸುವುದಕ್ಕೋಸ್ಕರವಾಗಿ ಆಯಿತಪ್ಪ. ಇಲ್ಲಿ ಕೊಡುವುದಕ್ಕಾಗಲಿಲ್ಲ, ಅಲ್ಲಿ ಕೊಡುತ್ತೇನೆ ಎಂದು ಹೇಳುವುದಕ್ಕೋಸ್ಕರ, ಈ ರೀತಿ ಬಳಕೆಯಾಗಿರುವುದರಿಂದ ಈ ಮೇಲ್ಮನೆ ಬೇಡ ಎಂದು ಹೇಳತಕ್ಕಂಥದ್ದು ಅಥವಾ ಅದು ನಮಗೆ ಅನುಕೂಲವಾದಾಗ ಬೇಕು ಎಂದು ತಪಂಟೆ ಹೊಡೆಯುವುದು, ನಮಗೆ ಬೇಡ ಎಂದ ಕೂಡಲೇ ಬೇಡ ಎಂದು ಹೇಳುವುದು ಇಂಥ ಒಂದು ವಿಪರ್ಯಾಸಕ್ಕೆ ಈಗ ಅವಕಾಶವಾಗಿದೆ. ಸಭಾಧ್ಯಕ್ಷರೇ, ಇದರ ಬಗ್ಗೆ ನಾನು ಇನ್ನು ಹೆಚ್ಚಿಗೆ ಹೇಳುವುದಕ್ಕೆ ತಯಾರಾಗಿಲ್ಲ. ನಾನು ಪ್ರಾಮಾಣಿಕವಾದ ಕೆಲವು ಅನಿಸಿಕೆಗಳನ್ನು ಈ ಸಂದರ್ಭದಲ್ಲಿ ಹೇಳಿದ್ದೇನೆ. ಒಂದು ತಾತ್ಪರ್ಯಕ್ಕೆ ನಾನು ಬರುವುದೇನೆಂದರೆ ಇವೊತ್ತು ಕಿರಿ ಸಂಖ್ಯೆಯನ್ನು ಏರಿಕೆ ಏರಿಸಬೇಕು ಎಂದು ನಿರ್ಣಯ. ಅದಕ್ಕೆ ತರ್ಕ ಏನೆಂದರೆ ಸಾಧಾರಣವಾಗಿ ಮೇಲ್ಮನೆಯ ಒಂದು ಸಂಖ್ಯಾಬಲ ನಮ್ಮ ಈ ಕೆಳಮನೆಯ ಸಂಖ್ಯಾಬಲದ ಮೂರನೆಯ ಒಂದು ಭಾಗದಷ್ಟಿರಬೇಕು ಎನ್ನತಕ್ಕಂಥ ಒಂದು ಧೋರಣೆ ಇರುವುದನ್ನು ಅನುಸರಿಸಿ ಈ ನಿರ್ಣಯ ಇದೆ.

ಒಬ್ಬ ಮಾನ್ಯ ಸದಸ್ಯರು.—ಅದು ಕಾನ್‌ಸ್ಟಿಟ್ಯೂಷನ್‌ನಲ್ಲಿದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಿನಿಮಮ್ ೪೦ ಸರಿ. ಆದರೆ ಯಾವ ಹೌಸನ್ನು ಅದಕ್ಕಿಂತ ಕಡಿಮೆ ಮಾಡುವುದಕ್ಕಾಗುವುದಿಲ್ಲ. ಆ ಒಂದು ತರ್ಕವನ್ನು ಹಿಡಿದುಕೊಂಡು, ಇರಬೇಕು ಎಂದು ಇಲ್ಲ. ಅದು ಜಾಸ್ತಿಯಾಗಬಾರದು ಎಂದು ಇರುವುದು. ನ್ಯಾಯವಾಗಿರುವುದು ಇದು enabling Provision. ಅಲ್ಲ. ಅದು ಕ್ರಾಸ್ ಆಗಬಾರದು ಎನ್ನುವ ದೃಷ್ಟಿಯಿಂದ ಇದೆ It is not an enabling provision it is a limiting factor. ಅಂದರೆ ಮೂರನೇ ಒಂದು ಭಾಗಕ್ಕಿಂತ ಜಾಸ್ತಿ ಹೋಗಬಾರದು ಎನ್ನತಕ್ಕಂಥ ಲಿಮಿಟಿಂಗ್ ಕ್ರೈಟೇರಿಯಾ ಆಗಿತ್ತು. ಅದು enabling criteria ಅಲ್ಲ. ಆದರೆ ಅದನ್ನೇ ಒಂದು enabling criteria ಆಗಿ ಬಳಸಿ ಇವತ್ತು ೭೫ಕ್ಕೆ ಏರಿಸಬೇಕು ಎಂದು ತಂದಿದ್ದಾರೆ. ನಾನು ಕೇಳುತ್ತೇನೆ. ೭೫ಕ್ಕೆ ೬೩ ಏರಿಸುವುದು ಇರಲಿ, ಬೊಮ್ಮಾಯಿಯವರೇ, ೭೫ಕ್ಕೆ ಏರಿಸತಕ್ಕಂಥದ್ದು ಇರಲಿ, ಈಗ ೬೩ ಇಲ್ಲದೇ ಎಷ್ಟು ವರ್ಷ ಆಯಿತು ಎಂದು ನಾನು ಕೇಳುತ್ತೇನೆ, ಮಾನ್ಯ ಲಕ್ಷ್ಮೀಸಾಗರ್‌ರವರು ಹೇಳಬೇಕು. ೬೩ರ ಸಂಖ್ಯೆ ಇಲ್ಲದೇ ಎಷ್ಟೋ ಕಾಲ ಆಗಿ ಹೋಯಿತು ? ನಿಜ ಎಂದರೆ ಒಂದು ತರಹ ಫುಲ್ ಕಪಾಸಿಟಿ ಇಲ್ಲದೆಯೇ ಕೌನ್ಸಿಲ್ ನಡೆಯುತ್ತಾ ಇರುವುದು ೧೦ ವರ್ಷ ಆಯಿತು.

ಶ್ರೀ ಎ. ಲಕ್ಷ್ಮೀಸಾಗರ್.—ಈಗ ೪೨ ಇರುವುದು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅದೇ ಹೇಳಿದ್ದಾದು. ಈ ೬೩ ರಿಂದ ೭೫ಕ್ಕೆ ಏರಿಸುವ ಆತುರ ಇರಲಿ. ನಾನು ಹೇಳುತ್ತಿರುವುದು ಏನೆಂದರೆ ೬೩ನ್ನು ೬೩ ಆಗಿಸುವ ಪ್ರಯತ್ನವೇ ಇವತ್ತಿನವರೆಗೂ ಸಮಾಪರ್ಕವಾಗಿಲ್ಲ. ಇವರು ಇಲ್ಲಿಂದ ಎರಡು ಕಾಗದ ಬರೆಯುವುದು. ಅವರು ಅಲ್ಲಿಂದ ಒಂದು ಕಾಗದ ಬರೆಯುವುದು. ಅದು ಅಲ್ಲಿಗೇ ಬಿದ್ದಿರುವುದು ಅಷ್ಟೇ ಹೊರತು ಹಾಗಾದರೆ ಇವತ್ತಿನವರೆವಿಗೂ ೧೦ ವರ್ಷದ ಅವಧಿಯಲ್ಲಿ ನಮಗೆ ಆ ಕೌನ್ಸಿಲನ್ನು ೬೩ರ ಸಂಖ್ಯೆಗೆ ತೆಗೆದುಕೊಂಡು ಹೋಗುವುದಕ್ಕೆ ನಮಗ್ಯಾರಿಗೂ ಶಕ್ತಿ ಬರಲಿಲ್ಲ ಎಂದರೆ ಏನರ್ಥ ? ೬೩ ಆಗದೇ ಇದ್ದ ಇನ್ನು ೪೨ ಆಗಿರುವುದನ್ನು ೭೫ಕ್ಕೆ ಏರಿಸಲು ನಿರ್ಣಯವನ್ನು ನಾವು ಇವತ್ತು ಮಾಡಿದರೆ ಅದಕ್ಕೆ ಏನು ಅರ್ಥ ಇದೆ ಎಂದು ನನಗನ್ನಿಸುವುದಿಲ್ಲ. ನನಗೆ ಕಂಡ ಮಟ್ಟಿಗೆ ಇಲ್ಲಿ ನೀವು ಜಿಲ್ಲಾ ಪರಿಷತ್ತು ಚುನಾವಣೆಯನ್ನು ಯಾವಾಗ ಮಾಡುತ್ತೀರೋ ? ಯಾವಾಗ ಬಿಡುತ್ತೀರೋ ? ಒಂದು ಸಾರಿ ಮಾಡುತ್ತೇವೆ ಎಂದು

ಹೇಳಿ ಇನ್ನೊಂದು ಸಾರಿ ಮತ್ತೆ ಅದನ್ನು ಹಾಗೆಯೇ ಒಳಗೆ ಇಡುತ್ತೀರಿ ? ಅದನ್ನೆಲ್ಲಾ ಮಾಡದೇ ಕೌನ್ಸಿಲನ್ನು ಓಪನ್ನಿಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯ ಇಲ್ಲ. ಏಕೆಂದರೆ ನನಗೆ ತಿಳಿದ ಮಟ್ಟಿಗೆ ನೀವು ಬರೆದಂಥ ಕಾಗದಕ್ಕೆ ಆಲ್ಲಿಂದ ಉತ್ತರ ಬಂದಿದೆ. ನೀವು ಮುನಿಸಿಪಾಲಿಟಿ ಚುನಾವಣೆಯನ್ನು ಮಾಡಿದ್ದೇವೆ ಎಂದು ಹೇಳಿದಿರಿ. ಆದರೆ ಮುನಿಸಿಪಾಲಿಟಿ ಒಂದೇ ಪ್ರಾತಿನಿಧ್ಯದ ಮೇಲೆ ಅವರು ಸ್ಥಳೀಯ ಸಂಸ್ಥೆಗಳ ಏನು ಸ್ಥಾನಗಳು ಇವೆ. ಅದಕ್ಕೆ ಚುನಾವಣೆಯನ್ನು ಮಾಡುವುದಕ್ಕೆ ಚುನಾವಣಾ ಆಯೋಗ ತಯಾರಿಲ್ಲ. ಅವರು ಗ್ರಾಮಾಂತರ ಪ್ರದೇಶದ ಪ್ರತಿನಿಧಿಗಳು ಬಂದ ಮೇಲೆ ಮಾಡೋಣ ಎಂದು ಹೇಳುತ್ತಾರೆ. ಆ ಪ್ರತಿನಿಧಿಗಳು ಯಾವಾಗ ಬರುತ್ತಾರೋ ಅವರು ಬರುವಷ್ಟರ ಹೊತ್ತಿಗೆ ಮುನಿಸಿಪಾಲಿಟಿ ಮನೆಗೆ ಹೋಯಿತು ಎಂದರೆ ಆಗ ಮತ್ತೊಂದು ಪ್ರಶ್ನೆ ಬರುತ್ತದೆ. ಇದೇ ರೀತಿಯಾಗಿ ಕಳೆದ ೧೦ ವರ್ಷಗಳಿಂದ ಕೇವಲ ೪೫೦ ಸಂಖ್ಯೆಯಲ್ಲಿ ಈ ಪರಿಷತ್ತು ಕೆಲಸವನ್ನು ನಿರ್ವಹಿಸುತ್ತಿರಬೇಕಾದರೆ ಇವತ್ತು ವಿಧಾನಸಭೆ ಅಧಿವೇಶನ ಕಟ್ಟಕಡೆಯ ದಿವಸ ಏತಕ್ಕೆ ಇಂಥ ಒಂದು ನಿರ್ಣಯವನ್ನು ತಾವು ತಂದಿದ್ದೀರೋ ನನಗೆ ಗೊತ್ತಿಲ್ಲ. ಅಥವಾ ನೀವು ಸಹಜವಾದ ಒಂದು ದೃಷ್ಟಿಯಿಂದ ಇನಾಕ್ಯುಯಸ್ ಆದ ನಿರ್ಣಯ. ಇದು ಹಾಗೆಯೇ ಪಾಸ್ ಆದರೂ ಆಗಬಹುದು ಎಂದು ತಂದಿರಬಹುದು. ನಮ್ಮ ನಾಯಕರುಗಳು ಇದರ ಬಗ್ಗೆ ಗಂಭೀರವಾದಂಥ ಒಂದು ಆಕ್ಷೇಪವನ್ನು ಎತ್ತಿದ್ದಾರೋ, ಈ ಹಿನ್ನೆಲೆಯಲ್ಲಿ ಇದನ್ನು ಮತ್ತೆ ನೀವು ವೆಜಾರಿಟಿ ಮಾಡಿ ಪಾಸ್ ಮಾಡುವುದು ಸರಿಯಲ್ಲ. ಕೆಲವು ವಿಚಾರಗಳನ್ನು ಇಡಬೇಕಾಗುತ್ತದೆ. ಇವತ್ತು ಮೆಜಾರಿಟಿ ಮೈನಾರಿಟಿ ಪ್ರಶ್ನೆ ಇಲ್ಲ. ಕೆಲವೊಂದು ವಿಷಯಗಳನ್ನು ವಿವಾದಾತೀತವಾಗಿ ನಾವು ನಿರ್ವಹಿಸಬೇಕಾದಂದು ನಮ್ಮೆಲ್ಲರ ಜವಾಬ್ದಾರಿ ಇದೆ. ಪ್ರತಿಯೊಂದನ್ನು ವೆಜಾರಿಟಿ ಮಾಡುವುದು ಆಗಿಬಿಟ್ಟರೆ ನಾವು ಇಲ್ಲಿ ಕುಳಿತುಕೊಳ್ಳುವ ಆಗತ್ಯ ಇಲ್ಲ. ಅಥವಾ ನಾವು ಕೂಡಾ ಸರ್ಕಾರ ಮಾಡಿದೆಲ್ಲಾ ನಿಲ್ಲಿಸಬೇಕೆಂದಲ್ಲಾ We agree that the Opposition should have its say and the Ruling Party must have its way. But there is a method ? ಯಾವ ಯಾವ ವಿಷಯದಲ್ಲಿ ಕನ್ಸ್ಲ್ಟೇಷನ್ ಬೇಕೋ ? ಯಾವುದು ನಿಜವಾಗಿಯೂ ಯುನಾನಿಮಸ್ ಆಗಿ ಪಾಸ್ ಆಗಬೇಕೋ ನೀವು ಅನುಸರಿಸುವಂಥ ಕ್ರಮದಿಂದಾಗಿ ಅದು ಒಂದು ವಿಚಾರಕ್ಕೆ ಧಕ್ಕೆ ಬರುತ್ತದೆ. ಇದು ಆಡ್ವೈಸರಿ ಕಮಿಟಿಯಲ್ಲೂ ಬರಲಿಲ್ಲ. ಯಾವುದರಲ್ಲೂ ಬರಲಿಲ್ಲ. ಇವತ್ತು ದಿಢೀರ್ ಎಂದು ಈ ನಿರ್ಣಯ ಬಂದ ಕೂಡಲೇ ಏನೋ ಆಡಳಿತ ಪಕ್ಷದವರು ತಮ್ಮ ವಂಶಾಗಿನ ನೇರಕ್ಕೆ ಸಂಖ್ಯಾಬಲ ಜಾಸ್ತಿ ಮಾಡಿಕೊಳ್ಳುವುದಕ್ಕೋಸ್ಕರ ಮಾಡುತ್ತಿದ್ದಾರೆ ಎನ್ನುವ ಅನುಮಾನ ಬರುವುದು ಸಹಜ ಇದೆ. ನಾನು ಒಂದೇ ಮಾತಿನಲ್ಲಿ ಮುಗಿಸುತ್ತೇನೆ. ಬಾಕಿ ಸಿದ್ಧಾಂತಗಳ ಚರ್ಚೆ ಮಾಡುವುದು ಇದ್ದರೆ ಹಲವಾರು ವಿಚಾರ ಇವೆ. ಅದನ್ನು ಬೇಕಾದರೆ ಅಲಾಯಿದ ಚರ್ಚೆ ಮಾಡೋಣ. ಆದರೆ ಈ ಒಂದು ನಿರ್ಣಯದ ಬಗ್ಗೆ ಅಷ್ಟೇನೂ ಅವಸರದ ಪ್ರಶ್ನೆ ಇಲ್ಲ. ಏಕೆಂದರೆ ಇವತ್ತು ನಾವು ಓಪನ್ನೇ ತಲುಪುವುದಕ್ಕೆ ಆಗಿಲ್ಲ. ಓಪನ್ನಿಕ್ಕೆ ಮಾಡುವುದಕ್ಕೆ ನಾವು ಅಷ್ಟು ಆತುರ ಪಡಬೇಕಾದ್ದು ಏನೂ ಇಲ್ಲ. ನೀವು ನಿರ್ಣಯ ಕಳುಹಿಸಿದ ಕೂಡಲೇ ತಕ್ಷಣ ಆಗುವುದೂ ಇಲ್ಲ. ನನಗೆ ಗೊತ್ತಿದೆ. ಸಾಕಷ್ಟು ಸಮಯ ಆದಕ್ಕೆ ಹಿಡಿಯುತ್ತದೆ. ಆ ಒಂದು ದೃಷ್ಟಿಯಿಂದ ಮುಂದೆ ಏನು ಈ ಸದನಕ್ಕೆ ತರುತ್ತೀರಿ. ಆ ಹೊತ್ತಿನಲ್ಲಿ ಕೂತು ನಾವುಗಳು ಸಮಾಲೋಚನೆ ಮಾಡಿ ಅದು ಆಗತ್ಯ ಎಂದು ಎಲ್ಲರ ತೀರ್ಮಾನಕ್ಕೆ ಬಂದರೆ ಒಮ್ಮತದಿಂದ ಮಾಡಬಹುದಪ. ಇದನ್ನು ದಯವಿಟ್ಟು ಪಾಸ್ ಮಾಡದೇ ಇದನ್ನು ಇಲ್ಲಿಗೆ ಮುಕ್ತಾಯ ಮಾಡುವುದು ಒಳ್ಳೆಯದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ

(ಅಧ್ಯಕ್ಷರು ಪೀಠವನ್ನಲಂಕರಿಸಿದರು)

† ಶ್ರೀ ಎಂ. ವೀರಪ್ಪ ಮೊಯಿಲಿ(ಕಾರ್ಕಳ).—ಮಾನ್ಯ ಅಧ್ಯಕ್ಷರೇ, ಕಾನೂನು ಸಚಿವರು ಈ ಒಂದು ಮಹತ್ವರವಾದ ನಿರ್ಣಯವನ್ನು ನಮ್ಮ ಸದನದ ಮುಂದೆ ತಂದಿದ್ದಾರೆ. ಈ ಬಗ್ಗೆ ನಮ್ಮ ನಾಯಕರು, ಹಿರಿಯ ಸದಸ್ಯರಾದ ಸನ್ಮಾನ್ಯ ಕೆ. ಹೆಚ್. ಪಾಟೀಲರು, ಬಸವಲಿಂಗಪ್ಪನವರು ವೆಂಕಟರಾಮಯ್ಯನವರು, ಮತ್ತು ಶ್ರೀನಿವಾಸ್‌ರವರೂ ಕೂಡಾ ಹೇಳಿದ್ದಾರೆ. ಆದರೆ ನನ್ನದೊಂದು ಮೂಲಭೂತವಾಗಿ ಆಕ್ಷೇಪಣೆ ಇದೆ. ಈ ಅಫಿಸಿಯಲ್ ರೆಸಲ್ಯೂಷನ್ ತಮಗೆ ಇದಸ್ನ್ನು ಮೂವ್ ಮಾಡುವುದಕ್ಕೆ ರೂಲ್ ಅಂಡ್ ಶರ್ಟರ್, ಪ್ರಾಕ್ಟೀಸ್ ಅಂಡ್ ಪ್ರೊಸೀಜರ್ ಇದರ ಪ್ರಕಾರ ಪೇಜ್

ಹೇಳಿ, there is a clear prohibition to take up this matter to day ಅದನ್ನು ನಾನು ಓದುತ್ತೇನೆ.

"Government Resolutions Though no period of notice has been prescribed for Government Resolutions, in actual practice, Ministers give notices of their Resolutions several days in advance of the date on which the item is proposed to be included in the list of business. Not on the night prior to that. In respect of admission, Government resolutions are subject to the same rules as the Private Members Resolutions." ಈ ರೀತಿ ಮಾಡಲಿಕ್ಕೆ ಬರುವುದಿಲ್ಲ. ಗೌರ್ನಮೆಂಟ್ ರೆಸಲ್ಯೂಷನ್‌ಗೂ ಪ್ರೈವೇಟ್ ರೆಸಲ್ಯೂಷನ್‌ಗೂ ವ್ಯತ್ಯಾಸ ಇಲ್ಲ. so far as procedures are concerned and so far as admission is concerned. ಆದರೂ ಗೌರ್ನಮೆಂಟ್ ರೆಸಲ್ಯೂಷನ್ ಎಂದು ಹೇಳಿ ಇದನ್ನು ತುರುಕಿಸಲಿಕ್ಕೆ ಬರುವುದಿಲ್ಲ. They have to follow some procedure as Private Members Resolution They have to give several days advance notice. ಪ್ರೈವೇಟ್ ರೆಸಲ್ಯೂಷನ್‌ಗೆ ನೋಟೀಸ್ ಕೊಡಬೇಕಾಗುತ್ತದೆ ಇದಕ್ಕೂ ಕೂಡ ಕೊಡಬೇಕಾಗುತ್ತದೆ.

೪-೦೦ ಪಿ.ಎಂ.

ಇನ್ನು ಅಲಾಟ್‌ಮೆಂಟ್ ಆಫ್ ಟೈಂ ಅಂಡ್ ಡಿಸ್ಕಷನ್ ವಿಚಾರಕ್ಕೆ ಸಂಬಂಧಪಟ್ಟಂತೆ ಹೇಳಿದ್ದಾದರೆ, ಕೌಲ್ ಅಂಡ್ ಶಕ್ಧರ್‌ನಲ್ಲಿ ಈರೀತಿ ಇದೆ. "Time fore discussion of the Government business is on the recommendation of the Business Advisory Committee." ನಿನ್ನೆಯ ದಿವಸ ಬಿಸಿನೆಸ್ ಅಡ್ವೈಸರಿ ಕಮಿಟಿ ಸಮಾವೇಶಗೊಂಡಿತು ನಿನ್ನೆಯ ದಿವಸವೇ ಈ ರೆಸಲ್ಯೂಷನ್ ವಿಚಾರವನ್ನು ಅಲ್ಲಿ ಪ್ರಸ್ತಾಪ ಮಾಡಬಹುದಿತ್ತು. ಆದರೆ ಮಾಡಿಲ್ಲ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಿನ್ನೆ ಇದು ಅಪ್ರೂವ್ ಆಗಿಲ್ಲ. ನಾನು ನಿನ್ನೆಯ ದಿವಸ ಬಿಸಿನೆಸ್ ಅಡ್ವೈಸರಿ ಕಮಿಟಿಗೆ ಹೋಗಿರಲಿಲ್ಲ, ಆದರೆ ನಮ್ಮ ನಾಯಕರು ಮತ್ತು ಕೆ.ಹೆಚ್.ಪಾಟೀಲ್‌ರ ವರಂ ಬಿ.ಎ.ಸಿ.ಗೆ ಹೋಗಿದ್ದರು. ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಬಿ.ಎ.ಸಿ.ನಲ್ಲಿ ಏನು ತೀರ್ಮಾನ ವಾಯಿತಂ ಎಂಬುದನ್ನು ತಾವು ಇಲ್ಲಿ ಅನೌನ್ಸ್ ಮಾಡಲಿಲ್ಲ ? ಈ ವಿಷಯವೇ ಬರಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅದನ್ನು ಇಲ್ಲಿ ಅನೌನ್ಸ್ ಮಾಡಲಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ರೂಲ್ಸ್‌ನಲ್ಲಿ ಬಹಳ ವ್ಯತ್ಯಾಸ ಇದೆ. ಲೋಕ ಸಭೆಯಲ್ಲಿ ಇರ ಬಹುದು, ಈ ಸದನದಲ್ಲಿ ಇರಬಹುದು, ಇದು ಬಹಳ ಡಿವಿಯೇಟ್ ಮಾಡುತ್ತಾ ಹೋಗಬಾರದು. So, far as the business of the House is concerned, the time for discussion of the Business is on the recommendation of the Business Advisory Committee. ಇಲ್ಲಿ ಬಿಸಿನೆಸ್ ಅಡ್ವೈಸರಿ ಕಮಿಟಿ ನಿರ್ಣಯ ಇಲ್ಲ ಅವರೂ ಕೇಳಲಿಲ್ಲ ನಮಗೆ ರಾತ್ರಿ ಒಂದು ಪೇಪರ್‌ನ್ನು ತಂದು ಕೊಟ್ಟರು. ಅದನ್ನು ಅಂದರೆ ಅಜೆಂಡಾವನ್ನು ಈ ಪೇಪರನ್ನು ನೋಡಿದಮೇಲೆ ನಮಗೆ ಬಹಳ ಆಶ್ಚರ್ಯವಾಯಿತು. ಏಕೆಂದರೆ ಇವತ್ತು ಇಂಥ ಒಂದು ರೆಸಲ್ಯೂಷನ್‌ನ್ನು ಮೂವ್ ಮಾಡುತ್ತಾರೆಂದು ಆ ಅಜೆಂಡಾದಲ್ಲಿ ಇತ್ತು. Even the Minister is not authorised to move the Resolution. Is there any specific law that the Minister should move the resolution? This is a subject pertaining to the portfolio of the Hon'ble Chief Minister. This is not subject pertaining to the portfolio of Hon'ble Law Minister. Whether the Leader of the House has written to the Speaker authorising Sri A. Lakshmisagar to move this Official Resolution ? The rule

is verry clear, "The Resolution may be moved by the Minister incharge or in his absence by any other Cabinet Minister of his rank after prior intimation to the Speaker." There should be a prior intimation by the Minister incharge. Here there is no such prior intimation. ಆದೂ ಇಲ್ಲಿ ಇಲ್ಲ. ನಮ್ಮ ಕಾನೂನು ಸಚಿವರು ೧೦೦ ಪರ್ಸೆಂಟ್ ರೂಲ್ಸ್‌ನ್ನು ವೆಯಲೆಟ್ ಮಾಡಿದ್ದಾರೆ. ೨–೩ ಪರ್ಸೆಂಟ್ ವಾರ್ಜಿನ್ ಕೊಡೋಣವೆಂದರೆ ಇದರಲ್ಲಿ ಆದೂ ಇಲ್ಲ. 100% marks can be awarded in violating all rules and regulations covering the official Resolution.

ಇನ್ನು ನಮ್ಮ ಮಾನ್ಯ ಕೆ. ಹೆಚ್. ಪಾಟೀಲ್‌ರವರು ಒಂದು ಪ್ರಮುಖವಾದ ಪ್ರಶ್ನೆಯನ್ನು ಎತ್ತಿದ್ದಾರೆ. It is not an evacuous question. It is an important question. The Government should know the responsibility. Whether the Resolution has been approved by the Government or Cabinet ? They have to clarify. ಈ ಅಫಿಷಿಯಲ್ ರೆಸಲೂಷನ್ ಇದುವರೆಗೂ ಚರ್ಚೆಯಾಗಿದೆ. ಇದನ್ನು ತಾವು ಬಿಟ್ಟಿದ್ದೀರಿ. ಇದನ್ನು ಈಗ ತಾವು ಡಿಫರ್ ಮಾಡಬೇಕು. ತಾವು ಎಲ್ಲಾ ರೂಲ್ಸ್‌ನ್ನೂ ಸಸ್ಪೆಂಡ್ ಮಾಡಬೇಕು. ಆದರೆ ಲೋಕಸಭೆಯಲ್ಲಿ ಕೂಡ ಇದು ಸ್ಪಷ್ಟವಾಗಿದೆ. There is no question of interpretation of the procedure which is laid down.

ಶ್ರೀ ಕೆ.ಹೆಚ್. ಪಾಟೀಲ್.—ಕ್ಯಾಬಿನೆಟ್‌ನಲ್ಲಿ ಡಿಸಿಷನ್ ಆಗಿದೆಯೆಂದು ಅಂದುಕೊಂಡಿದ್ದರೆ ಅದು ಬಹಳ ದಿವಸದ ಹಿಂದೆ ಆಗಿತ್ತು. ನಿನ್ನೆಯ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ವಿಚಾರವನ್ನು ಪ್ರಸ್ತಾಪಮಾಡಿ ಈ ರೀತಿ ಕ್ಯಾಬಿನೆಟ್‌ನಲ್ಲಿ ನಿರ್ಣಯವಾಗಿದೆಯೆಂದು ಹೇಳಬಹುದಿತ್ತು. ಅಲ್ಲಿ ಹೇಳಿಲ್ಲ ಎಂದರೆ ಇದು ಕ್ಯಾಬಿನೆಟ್‌ನಲ್ಲಿ ನಿರ್ಣಯವಾಗಿಲ್ಲ ಎಂದ ಹಾಗಾಯಿತು. ಈಗ ಏನಾದರೂ ಕ್ಯಾಬಿನೆಟ್‌ನಲ್ಲಿ ಆಗಿದ್ದರೆ ಅದಕ್ಕೂ, ನಮಗೂ ಯಾವುದೇ ಸಂಬಂಧವೂ ಇಲ್ಲ. ಆನಂತರ ಕ್ಯಾಬಿನೆಟ್‌ನಲ್ಲಿ ಆದಂಥ ನಿರ್ಣಯಕ್ಕೆ ನಾವು ಹೊಣೆಗಾರರಲ್ಲ. ಒಂದುವೇಳೆ ನಿರ್ಣಯವಾಗಿದ್ದರೆ, ನಾನು ಈರೀತಿ ಎಲ್ಲೋ ಹೋಗುತ್ತಿದ್ದೇನೆ, ಇಂಥವರಿಗೆ ನಾನೂ ಅಧಿಕಾರವನ್ನು ಕೊಟ್ಟು ಹೋಗುತ್ತಿದ್ದೇನೆಂದು ಮಾನ್ಯ ಮುಖ್ಯ ಮಂತ್ರಿಯವರು ಹೇಳಬಹುದಿತ್ತು. ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಕೊಡುತ್ತೇನೆಂದು ಆದರೂ ಹೇಳಬಹುದ್ದಿತ್ತು. ಇಂಥ ಸಂದ್ದಿಗ್ಧ ವಾತಾವರಣದಲ್ಲಿ ಇದನ್ನು ತರಲಿಕ್ಕೆ ಪ್ರಯತ್ನ ಮಾಡಬಾರದೆಂದು ನಾನು ಹೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೆ, ತಮ್ಮನ್ನೂ ಮತ್ತು ಈ ಸಭೆಯನ್ನೂ ಸರ್ಕಾರದವರು ಇಂಥ ಒಂದು ಸಂಧಿಗ್ಧ ಪರಿಸ್ಥಿತಿಗೆ ತರಬಾರದಿತ್ತು. ಈಗ ಇಂಥ ಪರಿಸ್ಥಿತಿಗೆ ತಮ್ಮನ್ನೂ ಮತ್ತು ಈ ಸದನವನ್ನೂ ತಂದಿಟ್ಟಿರುವುದರಿಂದ ಆದಕ್ಕೆ ತಾವು ಅವಕಾಶವನ್ನು ಕೊಡಬಾರದು. ಏಕೆಂದರೆ, ಇವರು ಎಲ್ಲಾ ಕಾನೂನು ಕಟ್ಟಳೆಗಳನ್ನೂ, ಪರಂಪರೆಗಳನ್ನೂ ಗಾಳಿಗೆ ತೂರಿ ಇಂಥ ಒಂದು ಅಫಿಷಿಯಲ್ ರೆಸಲ್ಯೂಷನ್‌ನ್ನು ಮೂವ್ ಮಾಡುವುದಾದರೆ ಈ ಸಭೆಯ ಘನತೆ ಗೌರವಗಳು ಎಲ್ಲಿಗೆ ಹೋಗುತ್ತವೆಂಬುದನ್ನು ತಾವು ಯೋಚನೆ ಮಾಡಬೇಕು. ಅದು ಏನೇ ಆಗಲಿ ತಾವು ಇದಕ್ಕೆ ಅವಕಾಶವನ್ನು ಕೊಡಬಾರದು. There is a sanctity for an Official resolution.

ಇನ್ನು ಇದರ ಮೇರಿಟ್ ಹಾಗೂ ಉಳಿದ ವಿಚಾರಗಳಿಗೆ ಸಂಬಂಧಪಟ್ಟಂತೆ ನಾನು ಆನಂತರ ಮಾತನಾಡುತ್ತೇನೆ. ಈಗ ತಾವು ಇದನ್ನು ಡಿಫರ್ ಮಾಡಬೇಕು. ಇವತ್ತುಹಿಂದಿನ ಎಲ್ಲ ಪರಂಪರೆಗಳನ್ನೂ, ಸತ್ಸಂಪ್ರದಾಯಗಳನ್ನೂ ಉಲ್ಲಂಘನೆಮಾಡಿ ಇಂಥ ಅಫಿಷಿಯಲ್ ರೆಸಲ್ಯೂಷನ್‌ನ್ನು ಮೂವ್ ಮಾಡುವುದಾದರೆ ಇನ್ನು ಮುಂದೆ ಯಾವುದೇಪ್ರೈವೇಟ್ ಮೆಂಬರ್ಸ್ ರೆಸಲ್ಯೂಷನ್ ಬಂದರೂ ಎಲ್ಲಾ ಕಟ್ಟುಕಟ್ಟಳೆಗಳನ್ನೂ ಇದೇರೀತಿ ಉಲ್ಲಂಘನೆಮಾಡಬೇಕಾಗುತ್ತದೆ. ಆಗ ಈ ಸದನದ ಪ್ರೋಸೀಡಿಂಗ್ಸ್‌ನ್ನು ಕಂಟ್ರೋಲ್ ಮಾಡುವುದು ಹೇಗೆ ಎಂಬುದನ್ನು ತಾವು ಯೋಚನೆ ಮಾಡಬೇಕು.

MR. SPEAKER.—Let us close this matter. We will take it up next time.